KARNATAKA FOREST (SECOND AMENDMENT) BILL 1976. MOTION TO CONSIDER

SRI C. N. PATIL (Minister for Forests).— I move:

"That the Karnataka Forest (Second Amendment) Bill, 1976, be taken into consideration."

MADAM SPEAKER — Motion moved:

"That the Karnataka Forest (Second Amendment) Bill, 1976, be taken into consideration."

† ಶ್ರೀ ಸಿ.ಎನ್. ಪಾಟೀಲ್.—ಈ ಎರಡನೇ ಅಮೆಂಡ್‌ಮೆಂಟ್ ಸೆಕ್ಷನ್ ೭೧ಕ್ಕೆ ಸಂಬಂಧಪಟ್ಟಿದ್ದು ಈಗಿದ್ದ ಒಂದು ಕಾನೂನಿನಿಂದ ಸ್ಮಗಲಿಂಗ್ ಮಾಡುತ್ತಿದ್ದ ವೆಹಿಕಲ್‌ಗಳನ್ನು ಮುಟ್ಟುಗೋಲು ಹಾಕಿ ಕೊಳ್ಳುವುದಕ್ಕೆ ಸಾಕಷ್ಟು ಅನುಕೂಲತೆ ಇಲ್ಲದೇ ಇದ್ದುದರಿಂದ ಈ ತಿದ್ದುಪಡಿಯನ್ನು ಸರಕಾರ ತರ ಬೇಕಾಯಿತು. ಅನೇಕ ಸಂದರ್ಭದಲ್ಲಿ ಕಾನ್‌ಫ್ಲಿಕ್ಟ್ ಆದರೂ ಈಗಿದ್ದ ಒಂದು ಕಾನೂನಿನಲ್ಲಿ ಸೆಕ್ಷನ್ ೬೨ರ ಪ್ರಕಾರ ವೆಹಿಕಲ್ಲನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಅನುಕೂಲತೆ ಇದ್ದರೂ ಕಾನ್‌ಫ್ಲಿಕ್ ಇದೆ. ಒಂದು ಎನ್‌ಕ್ವೈರಿ ಮಾಡತಕ್ಕೆ ಮಾಜಿಸ್ಟ್ರೇಟ್ ಕೋರ್ಟಿಗೆ ೧೦೦ಕ್ಕೆ ೯೦ ಕೇಸುಗಳು ಇದ್ದರೂ ಕೇವಲ ೧೦ ಕೇಸುಗಳಲ್ಲಿ ಮುಟ್ಟುಗೋಲು ಹಾಕುವಂತ ಸಂದರ್ಭ ಇರುವುದರಿಂದ ಇದರಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮತ್ತು ಪೋಲೀಸ್ ಅಧಿಕಾರಿಗಳಿಗೆ ಮುಟ್ಟುಗೋಲು ಹಾಕಿಕೊಳ್ಳಲು ಸಾಕಷ್ಟು ಅನುಕೂಲತೆ ಇಲ್ಲದೇ ಇರುವುದರಿಂದ ಸೆಕ್ಷನ್ ೭೧ಕ್ಕೆ ತಿದ್ದುಪಡಿ ತರುವುದರ ಮೂಲಕ ಅರಣ್ಯ ಸಂಪತ್ತನ್ನು ಸ್ಮಗಲಿಂಗ್ ಮಾಡುವುದನ್ನು ತಪ್ಪಿಸಬಹುದು; ಆ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತರಲಾಗಿದೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಫಾರೆಸ್ಟ್ ಸೆಕೆಂಡ್ ಅಮೆಂಡ್‌ಮೆಂಟ್ ಬಿಲ್ ೧೯೭೬ಕ್ಕೆ ತಂದಿರತಕ್ಕ ತಿದ್ದುಪಡಿ ಉದ್ದೇಶ ಘನವಾದದು ಆದರೂ ಕೂಡ ಇಷ್ಟು ತಡವಾಗಿ ಏತಕ್ಕೆ ತೆಗೆದುಕೊಂಡು ಬಂದರು ಎಂದು ಯೋಚನೆ ಮಾಡಬೇಕಾಗಿದೆ ಇದನ್ನು ಮೊದಲೇ ತಂದಿದ್ದರೆ. ಇದರ ಅನುಕೂಲ ಇನ್ನೂ ಹೆಚ್ಚು ಆಗುತ್ತಿತ್ತು. ಇದರಿಂದ ಬೇಕಾದಷ್ಟು ಅನುಕೂಲತೆ ಇದೆ, ಲಕ್ಷಾಂತರ ರೂಪಾಯಿ ಕಳ್ಳಸಾಗಣಿಕೆಯನ್ನು ತಪ್ಪಿಸುವುದಕ್ಕಾಗಿ ಈ ಮಸೂದೆಯನ್ನು ತೆಗೆದುಕೊಂಡು ಬಂದಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದರ ನಷ್ಟಕ್ಕೆ ಕಾರಣರು ಯಾರು ಎನ್ನುವ ಬಗ್ಗೆ ಕ್ರಮ ತೆಗೆದುಕೊಂಡಿದ್ದರೆ ಚನ್ನಾಗಿರುತ್ತಿತ್ತು. ಬುಡದಿಂದ ತುದಿಯವರೆಗೂ ಅರಣ್ಯ ಇಲಾಖೆಯ ಅಧಿಕಾರಿಗಳ ಕುಮ್ಮಕ್ಕು ಇರುವುದರಿಂದಲೇ ಇಂಥ ಅನಾಹುತಕ್ಕೆ ಕಾರಣವಾಗಿದೆ. ಪ್ರತಿ ಯೊಂದು ಹಂತದಲ್ಲೂ ಕೂಡ ಈ ಲಂಚದ ಹಾವಳಿ ಹೆಚ್ಚಾಗಿದ್ದು ಅಕ್ರಮ ಸಾಗಾಣಿಕೆ ವಿಪರೀತವಾಗಿ ವಿರತಕ್ಕಂಥಾದ್ದು ಶೋಚನೀಯಂವಾಗ ವಿಚಾರ ಮಾಡಬೇಕಾಗಿದೆ. ಅರಣ್ಯ ಸಂಪತ್ತಿನಿಂದ ನಮ್ಮ ರಾಜ್ಯದ ಆದಾಯ ಹೆಚ್ಚಿಸಬೇಕಾದುದು ಎರಡನೆಯದು, ಇವು ಬಹಳ ಮುಖ್ಯವಾದ ವಿಚಾರ. ಅರಣ್ಯ ಇಲಾಖೆಯಲ್ಲಿ ಕಳ್ಳಸಾಗಾಣಿಕೆ ಆಗುವುದಕ್ಕೆ ಮುಖ್ಯವಾಗಿ ಫಾರೆಸ್ಟ್ ಗಾರ್ಡನಿಂದ ಹಿಡಿದು ಉನ್ನತ ದರ್ಜೆಯ ಅಧಿಕಾರಿಗಳವರೆಗೆ ಒಂದಲ್ಲ ಒಂದು ವಿಧದಲ್ಲಿ ಸಹಾಯ ಇದ್ದೇ ಇದೆ, ಅದರ ಬಗ್ಗೆ ಯಾವ ಯಾವ ಕ್ರಮ ತೆಗೆದುಕೊಂಡಿದ್ದೀರಿ? ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಟ್ಟಿದ್ದರೆ ಬಹಳ ಸಂತೋಷವಾಗುತ್ತಿತ್ತು. ಅವರು ಮುಖ್ಯವಾಗಿ ಹೇಳುವುದೇನೆಂದರೆ ಕಳ್ಳಸಾಗಾಣಿಕೆ ಮಾಡುವಾಗ, ಗಾಡಿಗಳಲ್ಲಾಗಲೀ, ವಾಹನಗಳಲ್ಲಾಗಲೀ, ತಲೆ ಹೊರೆ ಮೇಲಾಗಲೀ ಇದಕ್ಕೆ ಸಂಬಂಧಪಟ್ಟ ಇತರೆ ಸಲಕರಣೆಗಳನ್ನು ಕಿತ್ತುಕೊಳ್ಳತಕ್ಕ ಅಧಿಕಾರ ಇದೆ. ಇಂಥ ಕಾನೂನು ಇದ್ದಾಗಲೂ ಕೋರ್ಟುಗಳಲ್ಲಿ ಬಿಡುಗಡೆ ಆಗುವುದಕ್ಕೆ ಕಾರಣ ಇತ್ತು. ಅದರಿಂದ ಪರಿಣಾಮಕಾರಿಯಾದ ಪ್ರಯೋಜನ ಆಗುತ್ತಾ ಇರಲಿಲ್ಲ. ಆದಂದರಿಂದ ಅದನ್ನು ಇನ್ನೂ ಭದ್ರಪಡಿಸಿ ಬಿಡುಗಡೆ ಆಗದೇ ಇರು ವುದಕ್ಕೆ ತಕ್ಕ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಬಿಡಂಗಡೆಯಾಗುವುದಕ್ಕೆ ಮುಖ್ಯ ಕಾರಣ ಏನು ಎಂದರೆ, ಅಲ್ಲಿರತಕ್ಕ ಅಧಿಕಾರಿಗಳು ಸರಿಯಾದ ಸಾಕ್ಷಿ ಒದಗಿಸಿಕೊಡದೇ ಇರುವುದು. ಕಳ್ಳಸಾಗಾಣಿಕೆ ಮಾಡುವವರಿಗೆ ಅನುಕೂಲವಾಗುವ ರೀತಿಯಲ್ಲಿ ಫೈಲಿಂಗ್‌ಗಳನ್ನು ಬಿಲ್ಟಪ್ ಮಾಡಿ ಕೋರ್ಟಿನಲ್ಲಿ ಸರಿಯಾದ ಸಾಕ್ಷಿಭೂತಗಳನ್ನು ಒದಗಿಸಿಕೊಡದೇ ಇರುವುದು ಮುಖ್ಯ ಕಾರಣ. ಇದರ ಬಗ್ಗೆ ಸಾಕಷ್ಟು

ಮುಂಜಾಗರೂಕತೆ ತೆಗೆದುಕೊಂಡು ತೊಡಕಂಗಳನ್ನು ಬಗೆಹರಿಸುವುದು ಒಳ್ಳೆಯದು, ಇದನ್ನು ಬಗೆಹರಿಸದೇ ಇದ್ದರೆ ಮುಂದೆ ರಿವಿಷನ್ ಮಾಡುವ ಕಾಲದಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಕೋರ್ಟಿನಲ್ಲಿ ಇರತಕ್ಕ ಕಾಲದಲ್ಲಿ ಸರಿಯಾದ ರೆಕಾರ್ಡಗಳನ್ನು ಬಿಲ್ಪಫ್ ಮಾಡದೆ ಹೋದರೆ ಅಪೀಲಿಂ ಸಂದರ್ಭದಲ್ಲಿ ತಪ್ಪಿಸಿಕೊಳ್ಳುವುದಕ್ಕೆ ಸಾಕಾದಷ್ಟು ಅವಕಾಶ ಇದೆ.

ಈಗ ಸಾಕಾದಷ್ಟು ಕಳ್ಳಸಾಗಾಣಿಕೆಯಾಗುತ್ತಿದೆ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ ಹೀಗಿರುವಾಗ ಇದನ್ನು ತಡೆಗಟ್ಟಬೇಕಾದರೆ ಇದರ ಬಗ್ಗೆ ಸಾಕಷ್ಟು ಸಾಕ್ಷಿಗಳನ್ನು ಅದಕ್ಕೆ ಬೇಕಾದಂತ ಕಾಗದಪತ್ರಗಳನ್ನು ಒದಗಿಸುವ ವ್ಯವಸ್ಥೆ ಮಾಡದೇ ಹೋದರೆ ಈ ಮಸೂದೆ ತಂದರು, ಈ ಮಸೂದೆಯಿಂದ ಸರಿಯಾದ ಪ್ರತಿಫಲ ದೊರೆಯುವುದಿಲ್ಲ ಎನ್ನುವ ಸಂದೇಹ ಈ ಸಂದರ್ಭದಲ್ಲಿ ಹುಟ್ಟುತ್ತದೆ. ಸಾಧಾರಣವಾಗಿ ಸೌದೆಗಳನ್ನು ತರತಕ್ಕ ಲಾರಿಗಳು ಸೌದೆತರತಕ್ಕ ಪರ್‌ಮಿಟ್ ತೆಗೆದುಕೊಂಡು, ಲಾರಿಗಳಲ್ಲಿ ಸೌದೆಗಳನ್ನು ತರುವಾಗ ಅವುಗಳ ಮಧ್ಯೆ ಟೀಕ್‌ವುಡ್, ರೋಸ್‌ವುಡ್ ತೆಗೆದುಕೊಂಡು ಹೋಗುವುದು ಇದೆ. ಹೀಗೆ ತೆಗೆದುಕೊಂಡು ಬಂದಂತಾದ್ದನ್ನು ಮಿಲ್‌ಗಳಲ್ಲಿ ಮಾರುತ್ತಾರೆ, ಅದನ್ನು ವಿಚಾರ ಮಾಡಿದರೆ ಸಾಕ್ಷೀಭೂತವಾಗಿ ಕಾಣುತ್ತದೆ. ಅನೇಕ ಸಾರಿ ಕಳ್ಳಸಾಗಾಣಿಕೆ ಮಾಡುವಾಗ ಮೂರು ಅಡಿ, ನಾಲ್ಕು ಅಡಿ, ಇರತಕ್ಕವನ್ನು, ಟೀಕ್‌ವುಡ್ ತೆಗೆದುಕೊಂಡು ಬರುತ್ತಾರೆ, ಅದನ್ನು ತಪ್ಪಿಸುವುದಕ್ಕೆ ಯಾವ ಒಂದು ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಯೋಚನೆ ಮಾಡಬೇಕು. ಇನ್ನೊಂದು ವಿಷಯ ಹೇಳಬೇಕು ಎಂದರೆ ಈ ಮರಗಳನ್ನು ಸಾಗಾಣಿಕೆ ಮಾಡುವಾಗ ಪರ್‌ಮಿಟ್ ಕೊಟ್ಟರೆ ಅದನ್ನು ದುರುಪಯೋಗಪಡಿಸಿ ಒಂದು ಸಾರಿ ಟ್ರಿಪ್ ಹೋಗಲು ಅವಕಾಶ ಕೊಟ್ಟರೆ, ಎರಡು ಮೂರು ಟ್ರಿಪ್ ಓಡಾಡಿಸುತ್ತಾರೆ ಎಂದು ಕೇಳಿದ್ದೇನೆ. ಈ ಪರ್‌ಮಿಟ್ ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಿದೆಯೋ, ಅದರಿಂದ ದುರುಪಯೋಗವಾಗಿ ಎಷ್ಟು ನಷ್ಟವಾಗುತ್ತಿದೆ ಎಂದು ಯೋಚನೆ ಮಾಡಬೇಕಾಗುತ್ತದೆ. ಇನ್ನು ನೈಬರಿಂಗ್ ಸ್ಟೇಟ್ ವಿಚಾರ ಹೇಳಬೇಕು ಎಂದರೆ ಪಕ್ಕದ ರಾಜ್ಯಗಳಿಗೆ ಬಹಳ ಸುಲಭವಾಗಿ ಸಾಗಾಣಿಕೆಯಾಗುತ್ತದೆ, ಅದರಿಂದ ನಷ್ಟವಾಗುತ್ತದೆ ಎಂದು ಹೇಳುತ್ತೇನೆ. ಇದರಿಂದ ಬಾರ್ಡರ್ ಸೀಲಿಂಗ್ ಅತಿ ಅಗತ್ಯವಾಗಿ ಆಗಬೇಕಾಗಿದೆ. ಬಾರ್ಡರ್‌ನಲ್ಲಿ ಸಾಮಾನ್ಯವಾಗಿ ಕಳ್ಳಸಾಗಾಣಿಕೆ ಹೆಚ್ಚು ನಡೆಯುತಕ್ಕದ್ದನ್ನು ನೋಡುತ್ತಿದ್ದೆವೆ. ಇನ್ನು ವ್ಯಾಪಾರ ಮಾಡತಕ್ಕ ಕಾಲದಲ್ಲಿ ಫಾರೆಸ್ಟ್ ಯಾರ್ಡಗಳಲ್ಲಿ ಬಿಡ್ ಮಾಡುವ ಸಂದರ್ಭಗಳಲ್ಲಿ ರಿಂಗ್ ಮಾಡಿಕೊಂಡು ಅನಂತರ ಪಾಲುಮಾಡಿಕೊಳ್ಳುವುದು ಇದೆ. ಸರ್ಕಾರಕ್ಕೆ ಬಿಡ್ ರಿಜೆಕ್ಟ್ ಮಾಡುವ ಅಧಿಕಾರ ಇದ್ದರು, ಈ ರೀತಿ ಹರಾಜು ಮಾಡುವಾಗ ಒಬ್ಬರಿಗೊಬ್ಬರು ರಿಂಗ್ ಮಾಡಿಕೊಂಡು ಅನಂತರ ಪಾಲು ಮಾಡಿಕೊಳ್ಳುವುದು ಇದೆ.

MR. DEPUTY SPEAKER.—The Hon'ble Member is speaking on subjects which are not within the scope of the amending Bill.

SRI T. R. SHAMANNA.—Sir, it does come within the scope of the present Bill. The Statement of objects and reasons deals with the heavy losses incurred due to smuggling of wood. Therefore, I wish to suggest that the Government should tighten up the administration from top to bottom, the administration should be made efficient and honest so that the revenue is not lost unnecessarily. At the same time it is very necessary to see that the forest wealth is increased and the Government gives greater attention to that aspect also. With these words, I conclude my speech.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ತಂದು, ಈ ಮರಮಟ್ಟುಗಳನ್ನು ಮರ ಸಾಗಿಸುವಂತೆ, ಪೆಹಿಕಲ್ಸ್ ಮತ್ತು ಅದಕ್ಕೆ ಸಂಬಂಧಪಟ್ಟ ಆಯುಧಗಳನ್ನು ವಶಪಡಿಸಿಕೊಳ್ಳುವುದಕ್ಕೆ ಈ ತಿದ್ದುಪಡಿ ತಂದಿದ್ದಾರೆ, ಬಹಳ ಅಗತ್ಯವಾದಂತ ಅಧಿಕಾರವನ್ನು ಈಗ ತಿದ್ದುಪಡಿ ಮುಖೇನ ಪಡೆಯಂತ್ತಿದ್ದಾರೆ. ಇದು ನಮಗೆಲ್ಲಾ ಸಾಕಷ್ಟು ಅನುಭವ ಇದೆ, ಅನೇಕ ಸಂದರ್ಭಗಳಲ್ಲಿ ಮರಗಳನ್ನು ಕಳ್ಳತನದಿಂದ ಸಾಗಾಣಿಕೆ ಮಾಡುತ್ತಿದ್ದಾರೆ. ಅವುಗಳನ್ನು ಸಾಗಾಣಿಕೆ ಮಾಡುವುದಕ್ಕೆ ಬಳಸಿದ ಸಾಧನಗಳನ್ನು ಅಮಾನತ್ತುಪಡಿಸುವ ಸಂದರ್ಭದಲ್ಲಿ ಕೆಲವೊಂದು ತಾಂತ್ರಿಕ ಲೋಪದೋಷಗಳು ಕಂಡುಬಂದು, ಸಾಕಷ್ಟು ರೀತಿಯಲ್ಲಿ ಹೆಚ್ಚಾಗಿ ಪೆಹಿಕಲ್ಸ್ ವಶಪಡಿಸಿಕೊಳ್ಳುವುದಕ್ಕೆ

ಸಾಕಾಗುತ್ತಿರಲಿಲ್ಲ. ಈ ತಿದ್ದುಪಡಿ ಮುಖೇನ ಸಂಬಂಧಪಟ್ಟ ಅಧಿಕಾರಿಗೆ ಅಧಿಕಾರ ಕೊಟ್ಟು ಮುಖೇನ ಬಿಗಿಯಾದ ಕ್ರಮ ಇದರಲ್ಲಿ ತಂದಿದ್ದಾರೆ ಎಂದು ಅನುಮಾನ ಇಲ್ಲ. ಇನ್ನೂ ೭೧ ಬಿ ಕ್ಲಾಸನ್ನು ತಂದಿರತಕ್ಕ ಉದ್ದೇಶ ಏನು ಎಂದು ಗೊತ್ತಾಗುವುದಿಲ್ಲ. ಏತಕ್ಕೆಂದರೆ ಸೆಕ್ಷನ್ ೭೧ (ಎ) ಸಬ್ ಕ್ಲಾಸ್ (೧)ರಲ್ಲಿ ಈರೀತಿ ಹೇಳಿದ್ದೀರಿ :—

"Where a forest offence is believed to have been committed in respect of timber, sandalwood, ivory, firewood and charcoal which is the property of the State Government, the officer seizing the property under sub-section (1) of section 62 shall, without any unreasonable delay produce it,....."

ಇದರ ಅರ್ಥ ಎಲ್ಲಿ ಅವನು ಅಪರಾಧ ಮಾಡಿದ್ದಾನೋ ಅದರ ಬಗ್ಗೆ ನಂಬಿಕೆ ಬಂದ ತಕ್ಷಣವೇ ಸಮಯ ತೆಗೆದುಕೊಳ್ಳದೆ ಅವನನ್ನು ಸಂಬಂಧಪಟ್ಟ ಅಧಿಕಾರಿಯು ಮುಂದೆ ಹಾಜರುಪಡಿಸುವುದು. ಇನ್ನು ಇದೇ ಸೆಕ್ಷನ್ ಸಬ್ ಕ್ಲಾಸ್ (೨)ರಲ್ಲಿ ಈರೀತಿ ಹೇಳಿದ್ದೀರಿ :—

"(2) Where an authorised officer seizes under sub-section (1) of section 62 any timber, sandalwood, charcoal, firewood and ivory which is the property of the State Government, or where any such property is produced before an authorised officer under sub-section (1) and he is satisfied that a forest offence has been committed in respect of such property, such authorised officer may, whether or not prosecution is instituted for the commission of such forest offence order confiscation of the property so seized together with all tools ropes, chains, boats, vehicles and cattle use in commiting such offence"

ಈ ಎರಡು ಕ್ಲಾಸಸ್ ಅನ್ನೂ ಇದಕ್ಕೆ ಹಾಕಿದ ಮೇಲೆ ಈ ೭೧ (ಬಿ) ಅನ್ನುವ ಕ್ಲಾಸ್ ತರಬೇಕಾದ ಅವಶ್ಯಕತೆ ಇರಲಿಲ್ಲ. ಏತಕ್ಕೆಂದರೆ ಅವನು ಅಪರಾಧ ಮಾಡಿದ್ದಾನೆ ಅಂತ ವ್ಯಕ್ತಪಟ್ಟಲ್ಲಿ ಅದನ್ನು ಸೀಸ್ ಮಾಡಿ ಸಂಬಂಧಪಟ್ಟ ಅಧಿಕಾರಿಯು ಮುಂದೆ ಅವನನ್ನು ಹಾಜರುಪಡಿಸತಕ್ಕಂಥಾದ್ದು ಇದ್ದೇ ಇದೆ. ನಂತರ ಅವನನ್ನು ಸಂಬಂಧಪಟ್ಟ ಅಧಿಕಾರಿಯು ಎದುರಿಗೆ ಹಾಜರುಪಡಿಸಿದ ಮೇಲೆ ಅವನು ಅಪರಾಧ ಎಂದು ಆ ಅಧಿಕಾರಿಗೆ ಖಚಿತವಾದ ಮೇಲೆ ಅವನ್ನೆಲ್ಲಾ ವಶಪಡಿಸಿಕೊಳ್ಳತಕ್ಕಂಥಾ ಒಂದು ಆಜ್ಞೆಯನ್ನು ತಾವು ಹೊರಡಿಸಿದ್ದೀರಿ. ಈ ೭೧ (ಬಿ)ನಲ್ಲಿ ಏನು ಹೇಳಿದ್ದೀರಿ ಎಂದರೆ ಈ ರೀತಿ ಆಜ್ಞೆ ಮಾಡುವುದಕ್ಕಿಂತ ಮುಂಚೆ ನೀವು ಮುಂಜಾಗರೂಕತೆ ಕ್ರಮ ವಹಿಸಬೇಕು ಎಂದು ಹೇಳುತ್ತೀರಿ, ಅಂದರೆ ಶೋಕಾಸ್ ನೋಟಿಸ್ ಅವನಿಗೆ ಕೊಡಬೇಕು ಅನ್ನುವುದೇ ನಿಮ್ಮ ಉದ್ದೇಶ.

SRI C. N. PATIL.—Section 71A explains the already existing powers under Section 62.

SRI KAGODU THIMMAPPA.—Section 71 B authorises an officer to issue a show-cause notice before passing any order of confiscation.

SRI C. N. PATIL.—That is only an opportunity given to explain what offence he had committed.

ಶ್ರೀ ಕಾಗೋಡು ತಿಮ್ಮಪ್ಪ.—ಈ ಬಗ್ಗೆ ನಿಮಗೆ ನಾನು ಒಂದು ಉದಾಹರಣೆ ಕೊಡುತ್ತೇನೆ. ಈ ಶೋಕಾಸ್ ನೋಟೀಸ್ ಕೊಡುವುದರಲ್ಲೇ ಸ್ವಲ್ಪ ಮೋಸ ನಡೆಯುತ್ತದೆ ಅನ್ನುವುದನ್ನು ಹೇಳುತ್ತೇನೆ. ತಮಗೆ ಆತ ಅಪರಾಧಿ ಎಂದು ಸ್ಯಾಟಿಸ್‌ಫೈ ಆದ ತಕ್ಷಣ ಅದನ್ನು ಸೀಸ್ ಮಾಡುತ್ತೀರಿ ತಾನೇ? ಆನಂತರ ಸೀಸ್ ಮಾಡಿದ ನಾಟ ಏನು ಇದೆ ಅದು ಸಂಬಂಧಪಟ್ಟ ಫೆಡಿಕಲ್‌ನರಿಗೇ ಸೇರಿರಲಿ ಅಥವಾ ಆ ನಾಟ ಯಾರಿಗೇ ಸೇರಿರಲಿ ಇದರ ಬಗ್ಗೆ ಶೋಕಾಸ್ ನೋಟೀಸ್‌ಕೊಟ್ಟಾಗ ಅವನು

ಏನು ಹೇಳಿಕೆ ಕೊಡುತ್ತಾನೆ ಅನ್ನುವುದನ್ನು ನೋಡಿಕೊಂಡು ನಂತರ ತೀರ್ಮಾನ ಮಾಡುವುದಕ್ಕೆ ಅಧಿಕಾರ ಇರುತ್ತದೆ. ಆದುದರಿಂದ satisfy himself ಅಂದರೆ He has exhausted all the explanation which is available. He has to go through all the material available and receive all information produced. Then only he can come to the conclusion that it is an offence. When once he is satisfied he is well within his bounds to pass such an order. ಆದುದರಿಂದ ಈ ಷೋಕಾಸ್ ನೋಟೀಸ್ ಕೊಡತಕ್ಕಂಥಾದ್ದರಲ್ಲಿ ಈ ಪೊಲೀಸ್ ಸಾಕಷ್ಟು ವಿಳಂಬ ವಾಗುತ್ತದೆ. ಏತಕ್ಕೆಂದರೆ ಷೋಕಾಸ್ ನೋಟೀಸ್ ಕೊಟ್ಟಾಗ ಮೇಲೆ ಅವನಿಂದ ಏನು ಹೇಳಿಕೆ ಬರುತ್ತದೋ ಅದನ್ನು ನೋಡಿಕೊಂಡು ನೀವು ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ನಿಮಗೆ ಇತ್ತೀಚೆಗೆ ನಡೆದಂಥಾ ಒಂದು ಉದಾಹರಣೆಯನ್ನೇ ಹೇಳುತ್ತೇನೆ. ನಮ್ಮ ಸಾಗರ ತಾಲ್ಲೂಕಿನಲ್ಲಿ ಬಿಳಿಗೆರೆ ಗ್ರಾಮದ ಫಾರೆಸ್ಟ್ ಗಾರ್ಡ್ ಎಲ್ಲಾ ಸೇರಿಕೊಂಡು ಆ ಲಾರಿಯವರೂ ಹೈತವರ್ ಸೇರಿ ಕಳ್ಳ ಸಾಗಾಣಿಕೆ ಮಾಡುವುದಕ್ಕೆ ನಾಟವನ್ನು ಲೋಡ್ ಮಾಡುತ್ತಾ ಇದ್ದರು. ಆಮೇಲೆ ಏನಾ ಯಿತು ಎಂದರೆ ಇದನ್ನು ಆ ಊರಿನವರು ಕಂಡುಹಿಡಿದು ಆ ಫಾರೆಸ್ಟ್ ಗಾರ್ಡ್, ಹೈತವರ್ ಮತ್ತು ಲಾರಿಯನ್ನು ಹಿಡಿದುಕೊಂಡು ಸಾಗರಕ್ಕೆ ವರ್ತಮಾನ ಕಳುಹಿಸಿದರು. ಅವರೆಲ್ಲಾ ಬಂದು ಅದನ್ನು ಸೀನ್ ಮಾಡಿ ಇವರ ಬಗ್ಗೆ ಬೆಳಿಗ್ಗೆ ಹೇಳಿಕೆ ತೆಗೆದುಕೊಳ್ಳಬೇಕು ಅಂತ ಮಾಡಿದರು. ಅಷ್ಟರೊಳಗೆ ಅವರ ಬಗ್ಗೆ ಒಂದು ಒಪ್ಪಂದವಾಯಿತು. ನಾನು ಒಂದು ಹೇಳಿಕೆ ಕೊಡುತ್ತೇನೆ, ನೀನು ಒಂದು ಹೇಳಿಕೆ ಕೊಡು ಎಂದು ಆಯಿತು. ಆಗ ಲಾರಿಯವನ ಹೇಳಿಕೆ ಈ ರೀತಿ ಇತ್ತು ಇಲ್ಲಿಂದ ನಾಟವನ್ನು ತೆಗೆದುಕೊಡು ಬರಬೇಕು ಎಂದು ಹೇಳಿದ ಅದಕ್ಕೆ ನಾನು ಅಲ್ಲಿಗೆ ಹೋದ ಚಿಗೆ ಏಷ್ಟು ನನಗೆ ತಿಳಿಸಲಿಲ್ಲ ಎಂದು ಹೇಳಿದನು ನಂತರ ಇನೊಬ್ಬ ಏನು ಹೇಳಿಕೆ ಕೊಟ್ಟ ದರೆ ನಾವು ಅವನಿಗೆ ತಿಳಿಸಲಿಲ್ಲ ಬಾ ಎಂದು ಕರೆದೆವು ಎಂದು ಹೇಳಿದನು.

SRI C. N. PATIL.—Is it a story or an actual incident ?

SRI KAGODU THIMMAPPA.—I am not a person to narrate stories. To is a hard fact. This is an incident. The case is still going on. The Hon'ble Minister may call for the records. ಅವರು ಈ ರೀತಿ ಹೇಳಿಕೆ ಕೊಟ್ಟು ಕೊನೆಗೆ ಏನು ಆಲೋಚನೆ ಮಾಡಿದರೂ ಎಂದರೆ ನಾಟದ್ದು 4-5 ಪಾವಿರ ರೂಪಾಯಿ ಬೆಲೆ ಆಬಹುದು, ಲಾರಿ 15 ಸಾವಿರ ರೂಪಾಯಿ ಬೆಲೆ ಆಗಬಹುದು, ಲಾರಿಯವನಿಗೆ ಈ ರೀತಿ ಹೇಳಿಕೊಡು ಎಂದು ತಿಳಿಸೋಣ, ಸಂಬಂಧಪಟ್ಟ ಅಧಿಕಾರಿಗೂ ಈ ರೀತಿ ಎಂದು ತಿಳಿಸೋಣ ಈ ರೀತಿಹೇಳಿಕೆ ಕೊಟ್ಟರೆ ಎಲ್ಲಾ ಸರಿಹೋಗುತ್ತದೆ,ಎಂದು ಅವರು ತಿಳಿದುಕೊಂಡರು. ಅವರಿಂದ ನಿಮ್ಮ ಅಧಿಕಾರಿಯು ಈ ರೀತಿ ಹೇಳಿಕೆ ಪಡೆಯುತ್ತಾರೆ. ಇದು ಸ್ವಾಭಾವಿಕ. ಈ ವಿಚಾರ ತೀರ್ಮಾನ ಕೊಡತಕ್ಕಂಥಾ ಅಧಿಕಾರಿಗೆ ಗೊತ್ತಿರಲಿಲ್ಲ. ಒಟ್ಟಿನಲ್ಲಿ ಈಗ ಲಾರಿಯವನನ್ನು ಬಿಡಬೇಕು ಅನ್ನುವ ತೀರ್ಮಾನಕ್ಕೆ ಬಂದಿದೆ ಈ ಬಗ್ಗೆ ನಿಮಗೆ ಈ ದೃಷ್ಟಾಂತವನ್ನು ಏತಕ್ಕೆ ಕೊಟ್ಟೆ ಎಂದರೆ ಈ ಷೋಕಾಸ್ ನೋಟೀಸ್ ಕೊಡತಕ್ಕಂಥಾ ನಿರ್ದೇಶದಲ್ಲಿ ಕೆಲವು ರೋಪಮೋಷಗಳು ಮತ್ತು ಆರು ಈ ರೀತಿಯಾಗಿ ಪೋಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಅಂತ ಹೇಳಿದ್ದೇನೆ. ಆದುದರಿಂದ ಮೊದಲನೇ ಕಾಲಮ್‌ನಲ್ಲೇ "After satisfying himself" ಎಂದು ಆಮೇಲೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಈ ಒಂದು ವಾಕ್ಯವನ್ನು ಸೇರಿಸಿಬಿಟ್ಟರೆ ಅನುಕೂಲವಾಗುವುದಿಲ್ಲವೇ? "After hearing the parties concerned; after giving an opportunity; after going through all the material" ತಾನು ಈ ರೀತಿಯಾಗಿ ಡಿಸ್ಪಾಸ್ ಮಾಡಿದರೆ ಅವನಿಗೆ ಷೋಕಾಸ್ ನೋಟೀಸ್ ಕೊಡುವ ಅವಶ್ಯಕತೆಯೇ ಇರುವುದಿಲ್ಲ.

ಈಗ ಸ್ಯಾಂಡಲ್‌ವುಡ್ ಮರವನ್ನು ಯಾವ ರೀತಿ ಕಳ್ಳಸಾಗಾಣಿಕೆ ಮಾಡುತ್ತಾರೆ ಅನ್ನುವುದು ಗೊತ್ತಿದೆ. ಚೆನ್ನಾಕಡಿಮೆ ನನಗೂ ಗೊತ್ತಿದೆ. ಆವರು ಗಂಧದ ಮರಗಳನ್ನು ಸಾಗಾಣಿಕೆ ಮಾಡಬೇಕಾದರೆ ಒಂದು ಲಾರಿ ಲೋಡನ್ನು ಇಲ್ಲಿಂದ ಉತ್ತರ ಪ್ರದೇಶಕ್ಕೆ ಸಾಗಾಣಿಕೆ ಮಾಡಿದರೆ ಇಲ್ಲಿಗಿಂತ ಎರಡಷ್ಟು ದುಡ್ಡು ಬರುತ್ತದೆ. ಒಂದು ವೇಳೆ ಹೋಯಿತು ಎಂದರೆ ನಾಟವೂ ಹೋಯಿತು

ಲಾರಿಯೂ ಹೋಯಿತು ಅನ್ನುವ ತೀರ್ಮಾನಕ್ಕೆ ಸಹ ಎಷ್ಟೋ ಜನರು ಬರುತ್ತಾರೆ. ಆ ಲಾರಿಯವರು ಯಾರು ಎಲ್ಲಿಂದ ಬರುತ್ತಾರೆ ಎಂದರೆ ಪಂಜಾಬಿನಿಂದಲೋ ಮಹಾರಾಷ್ಟ್ರದಿಂದಲೋ ಅಥವಾ ಆಂಧ್ರಪ್ರದೇಶದಿಂದಲೋ ಬರುತ್ತಾರೆ. ಆ ಲಾರಿ ರಿಜಿಸ್ಟ್ರೇಷನ್ ಬೇರೆ ರಾಜ್ಯಕ್ಕೆ ಸಂಬಂಧಪಟ್ಟ ದ್ದಾಗಿರುತ್ತದೆ. ಮಾನ್ಯ ಮಂತ್ರಿಗಳಿಗೆ ಈ ವಿಚಾರ ಗೊತ್ತಿರಬಹುದು ಗಂಧದ ಮರದ ಸಾಗಾಣಿಕೆ ಹೆಚ್ಚಾಗಿ ಬಾಂಬೆ ಮುಖಾಂತರವೇ ಹೋಗುತ್ತದೆ. ಅಲ್ಲಿಯ ಅಧಿಕಾರಿಗಳು ಇಂಥಾ ಲಾರಿಗಳನ್ನು ಹೆಚ್ಚಾಗಿ ಹಿಡಿದಿರುತ್ತಾರೆ ಅದು ಅವರ ಇಲಾಖೆಯ ದಾಖಲೆಯಲ್ಲಿ ಇದೆ. ಬೇಕಾದರೆ ಈ ಬಗ್ಗೆ ವಿಚಾರಣೆ ತರಿಸಿ ನೋಡಿ ಗೊತ್ತಾಗುತ್ತದೆ. ಯಾವ ಯಾವ ರಾಜ್ಯದ್ದು ಎಷ್ಟೆಷ್ಟು ಲಾರಿಗಳನ್ನು ಹಿಡಿದಿದ್ದಾರೆ ಅನ್ನುವುದು ಗೊತ್ತಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದ್ದು ಎಷ್ಟು ಹಿಡಿದಿದಾರೆ. ಹೊರಗಿನ ರಾಜ್ಯದ್ದು ಎಷ್ಟು ಹಿಡಿದಿದ್ದಾರೆ ಅನ್ನುವುದು ಅವರ ದಾಖಲೆಯಲ್ಲಿ ಸಿಕ್ಕುತ್ತದೆ. ಬೇಕಾದರೆ ತರಿಸಿ ನೋಡಿ. ಹೊರಗಿನ ರಾಜ್ಯದ ರಿಜಿಸ್ಟ್ರೇಷನ್ ಮಾಡಿಸುವ ಉದ್ದೇಶ ಈ ಗಂಧದ ಮರಗಳನ್ನು ಕಳ್ಳ ಸಾಗಾಣಿಕೆ ಮಾಡುವ ಉದ್ದೇಶದಿಂದಲೇ ರಿಜಿಸ್ಟ್ರೇಷನ ಮಾಡಿಸುತ್ತಾರೆ. ಇದು ಮೇಲುನೋಟಕ್ಕೆ ಮಾತ್ರ ಕಾಣುತ್ತದೆ. ಗಂಧದ ಮರಗಳನ್ನು ಯಾವುದೇ ಕಾಡಿನಲ್ಲಿ ಕಡಿದರೂ ಕೂಡ ಅದು ಅಪರಾಧ. everybody can come to the conclusion that this is an offence. ಹೀಗಿದ್ದರೂ ಕೂಡ ಲಾರಿಯವರು ಕಳ್ಳ ಸಾಗಾಣಿಕೆ ಮರವನ್ನು ತೆಗೆದುಕೊಂಡು ಹೋಗುತ್ತಾರೆ. ಕಳ್ಳಸಾಗಣಿಕೆ ಮಾಡುವಾಗ ಅವನ್ನು ಕಂಡುಹಿಡಿದು ಆ ಲಾರಿಯನ್ನು ಸೀಸ್ ಮಾಡಿದ ಮೇಲೆ ಡ್ರೈವರ್ ಹತ್ತಿರ ಬರೆಸಿಕೊಳ್ಳುತ್ತಾರೆ. ಲಾರಿಯನ್ನು ಸೀಸ್ ಮಾಡಿ, ಅವನನ್ನು ಅಧಿಕಾರಿಯ ಮುಂದೆ ಹಾಜರು ಮಾಡುತ್ತಾರೆ. ಈಗ ಅವನಿಗೆ ಪೋಕಾಸ್ ನೋಟೀಸ್ ಕೊಟ್ಟರೆ ಏನಾಗುತ್ತದೆ ಎಂದರೆ ಅವನಿಂದ ಹೇಳಿಕೆ ತೆಗೆದುಕೊಂಡು ಅವನು ಅಪರಾಧ ಮಾಡಿದ್ದಾನೋ ಇಲ್ಲವೋ, ಅವನು ಯಾವ ಕಾರಣಕ್ಕಾಗಿ ಹೋಗಿದ್ದಾನೆ ಇದನ್ನು ತೀರ್ಮಾನ ಮಾಡುವವರೆಗೆ ಆತ ಆ ಅಧಿಕಾರಿಗಳಿಗೆ ತಾಪಾ ಹಾಕಿ ಸುಖವಾಗಿ ಬಿಡಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಸಿ.ಎನ್. ಪಾಟೀಲ್.—ತಾಪಾ ಅಂದರೆ ಏನು ಅನ್ನುವುದು ನನಗೆ ಅರ್ಥವಾಗಲಿಲ್ಲಾ.

ಶ್ರೀ ಕಾಗೋಡು ತಿಮ್ಮಪ್ಪ.—ತಾಪಾ ಅಂದರೆ ಏನಾದರೂ ಆ ಅಧಿಕಾರಿಗಳಿಗೆ ಹಾಮೂಲು ವಗೈರೆ ಕೊಟ್ಟು ಅದರಿಂದ ಜಾರಿಕೊಳ್ಳುವುದಕ್ಕೆ ಏನಾದರೂ ಪ್ರಯತ್ನ ಮಾಡೋಣ ಅನ್ನುವುದು. ಅದಕ್ಕೆ ಈ ಪೋಕಾಸ್ ನೋಟೀಸ್ ಕೊಡುವುದರಲ್ಲಿ ಅವಕಾಶವಾಗುತ್ತದೆ. ಇದು ಏನಾಗುತ್ತದೆ ಎಂದರೆ ಹಾಗೇ ಹೋಗತಕ್ಕಂಥಾ ಮಾರಿಯನ್ನು ಮನೆ ಒಳಗೆ ಕರೆದುಕೊಂಡು ಕೂರಿಸಿಕೊಂಡ ಹಾಗಾಯಿತು.

ಇಲಾಖೆಯವರಿಗೆ ಸುಲಭವಾಗಿ ಅಂತಹ ಲಾರಿಗಳನ್ನು ಬಿಟ್ಟು ಹೋದ ಪ್ರಕರಣಗಳಿವೆ. ಇಂತಹ ಪ್ರಕರಣಗಳಿವಾಗ್ಯೂ ಸಹ ತಾವು ಮತ್ತೆ ಇಲ್ಲಿ ಇದಕ್ಕಾಗಿ ಉಪಯೋಗಿಸತಕ್ಕಂಥ ವಾಹನಗಳನ್ನು ಸೀಜ್ ಮಾಡಿ ಇಟ್ಟುಕೊಂಡು, ನಂತರ ಪೋಕಾಸ್ ನೋಟೀಸ್ ಕೊಡುವುದರ ಮೂಲಕ ಸಂಬಂಧಪಟ್ಟವನನ್ನು ಕರೆಸಬೇಕಾದಂಥ ನಾಧರ್ಮವನ್ನು ನೀವೇ ಉಂಟುಮಾಡುತ್ತಿದ್ದೀರಿ. ಅದು ನರಿಯಲ್ಲ, ಪೋಕಾಸ್ ನೋಟೀಸ್ ಕೊಡುವ ಅವಶ್ಯಕತೆಯೇ ಇರಬಾರದು. ಒಂದುವೇಳೆ ಸಂಬಂಧಪಟ್ಟ ವಾಹನದ ಮಾಲೀಕನನ್ನು ಕರೆಸಿ ಕೇಳಿದಾಗ, ಆತ ಈ ಕೆಲಸಕ್ಕಾಗಿ ಡ್ರೈವರ್ ವಾಹನವನ್ನು ತೆಗೆದುಕೊಂಡು ಹೋಗಿದ್ದು ನನಗೆ ಗೊತ್ತೇಇಲ್ಲವೆಂದು ಹೇಳಬಹುದು. ಆಗ ಏನು ಮಾಡುತ್ತೀರಿ?

4-30 P.M.

ಶ್ರೀ ಸಿ.ಎನ್. ಪಾಟೀಲ್.—ಅದಕ್ಕಾಗಿಯೇ ಇಲ್ಲಿ 'with or without knowledge' ಎಂದು ಹೇಳಿದರು;

[MR. DEPUTY SPEAKER in the chair]

ಶ್ರೀ ಕಾಗೋಡು ತಿಮ್ಮಪ್ಪ. ನನ್ನ ಅನುಮತಿ ಇಲ್ಲದೆ ಡ್ರೈವರ್ ವಾಹನವನ್ನು ತೆಗೆದುಕೊಂಡು ಹೋಗಿದ್ದ ಎಂದು ಓನರ್ ಆದವನು ಹೇಳಬಹುದು. ಆಗ ತಾಪ ಅದನ್ನು ಇಮ್ಮಿಕೊಳ್ಳಬೇಕಾಗುತ್ತದೆ ಅಷ್ಟೆಂದರೆ ಇಲ್ಲಿ

"Without prejudice to the provisions of sub section (1), no order confiscating any tool, rope, chain, boat, vehicle or

cattle shall be made under Section 71 A if the owner of the tools,rope,chain,boat,vehicle or cattle proves to the satisfaction of the authorised officer that it was used in carrying the timber, sandalwood, charcoal, firewood or ivory without the knowledge or connivance of the owner himself, his agent, if any, and the person in charge of the tool, rope, chain, boat, vehicle or cattle and that each of them had taken all reasonable and necessary precautions against such use."

ಎಂದು ಹೇಳಿದ್ದೀರಿ. ಅಂದರೆ ಮಾಲೀಕನ ತಿಳಿವಳಿಕೆಗೆ ಬಾರದೆ ಅತನ ಏಜೆಂಟ್ ಅಥವಾ ಡ್ರೈವರ್ ಈ ಕೆಲಸ ಮಾಡಿದ್ದರೆ ಆಥವಾ ಮಾಲೀಕನಾದವನು ಡ್ರೈವರ್ ಜೊತೆಯಲ್ಲಿ ಷರೀಕ್ ಆಗಿ ಈ ಕೆಲಸ ಮಾಡಿದ್ದರೆ, ಅಂತಹವರನ್ನು ಬಿಟ್ಟುಬಿಡಬೇಕು ಎಂಬುದೇ ಇದರ ಅರ್ಥ. ಓನರ್ ಅನುಮತಿ ಇಲ್ಲದೆ ಇಂತಹ ಕೆಲಸಕ್ಕೆ ವಾಹನವನ್ನು ಡ್ರೈವರ್ ಅದವನ್ನು ಉಪಯೋಗಿಸಿದ್ದರೆ ಹಾಗೆಯೇ ಬಿಟ್ಟುಬಿಡಬೇಕಾಗುವುದರಿಂದ, ಸರ್ವೇಸಾಧಾರಣವಾಗಿ ಎಲ್ಲಿ ಓನರ್‌ಗಳೂ ನಾನು ಅದರಲ್ಲಿ ಷರೀಕ್ ಆಗಿಲ್ಲ, ನನ್ನ ಅನುಮತಿ ಇಲ್ಲದೆ ಡ್ರೈವರ್ ಆ ಕೆಲಸ ಮಾಡಿದ್ದಾನೆಂದು ಹೇಳುತ್ತಾರೆ. ನಿಮ್ಮ ಅಧಿಕಾರಿಗಳು ನಂಬುವ ರೀತಿಯಲ್ಲಿ ಅವರು ರುಜುವಾತು ಮಾಡಿದರೆ, ಅಂತಹ ವಾಹನಗಳನ್ನು ಬಿಟ್ಟುಬಿಡಬೇಕಾಗುತ್ತದೆ. ಯಾವ ಕಾರಣದಿಂದ ವಾಹನಗಳನ್ನು ವಶಪಡಿಸಿಕೊಳ್ಳಬೇಕೆಂದು ನಿಮ್ಮ ಅಧಿಕಾರಿಗಳಿಗೆ ಅಧಿಕಾರ ಕೊಡಲು ಈ ತಿದ್ದುಪಡಿಯನ್ನು ತಂದಿದ್ದೀರಿ, ಅದು The spirit of the entire clause is taken away by clause 71 B. ಆದ್ದರಿಂದ ಇದು ಸಮಯೋಚಿತವಾಗಿಲ್ಲವೆಂದು ಹೇಳುತ್ತೇನೆ. ಆದ್ದರಿಂದ ದಯವಿಟ್ಟು ಇದನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಕಳ್ಳತನದಿಂದ ಟಿಂಬರ್‌ನ್ನು ಕಳ್ಳಸಾಗಾಣಿಕೆ ಮಾಡುತ್ತಿದ್ದಾರೆಂಬುದು ರುಜುವಾತಾದರೆ, ಅದನ್ನು ಸಾಗಿಸುವುದಕ್ಕೆ ಉಪಯೋಗಿಸುತ್ತಿದ್ದ ವಾಹನ ಮತ್ತು ಇತರ ಸಾಧನಗಳನ್ನು ವಶಪಡಿಸಿಕೊಳ್ಳುವುದಕ್ಕೆ ನಿಮ್ಮ ಅಧಿಕಾರಿಗಳಿಗೆ ಅಧಿಕಾರ ಕೊಟ್ಟರೆ ಮಾತ್ರ ನೀವು ಉದ್ದೇಶಿಸಿದ ಕಲಸವಾಗುತ್ತದೆಂದು. ಹೇಳುತ್ತೇನೆ. ಷೋಕಾಸ್ ನೋಟೀಸ್ ಕೊಡುವಂತಹ ಅವಶ್ಯಕತೆಯೇ ಇರಬಾರದು; ಒಂದು ಸಲ ಮಾಲನ್ನು ವಶಪಡಿಸಿಕೊಂಡಮೇಲೆ ಅದರ ಮೇಲೆ ಅಪೀಲ್ ಹಾಕುವುದಕ್ಕೆ ನೀವು ಅಧಿಕಾರವನ್ನು ಇಟ್ಟುಕೊಳ್ಳಬಹುದು. The spirit of the amendment is lessened. ಆದಕಾರಣ ಈ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು (ಶಾಂತಿನಗರ) —ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಅರಣ್ಯಮಂತ್ರಿಗಳು ತಂದಿರತಕ್ಕಂಥ ದಿ ಕರ್ನಾಟಕ ಪ್ರಿಸರ್‌ವೇಷನ್ ಆಫ್ ಟ್ರೀಸ್ ಬಿಲ್, ೧೯೬೫, ಬಿಲ್ಲಿದೆ, ಅದನ್ನು ನಾನು ಹೃದಯಪೂರ್ವಕವಾಗಿ ಸ್ವಾಗತಿಸುತ್ತ, ಇದರ ಸಂಬಂಧದಲ್ಲಿ ನಾಲ್ಕು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ಕೆಲಸ ಈ ಹಿಂದೆಯೇ ಆಗಬೇಕಾಗಿತ್ತು. ಏನೋ ಕಾರಣಾಂತರಗಳಿಂದ ಇಲ್ಲಿಯವರೆಗೆ ಈ ತಿದುಪಡಿಯನ್ನು ಮಾಡುವುದಕ್ಕೆ ಸಾಧ್ಯವಾಗದಿದ್ದರೂ ಸಹ, ಈಗಲಾದರೂ ಈ ಕೆಲಸವನ್ನು ಮಾಡುತ್ತಿರುವುದು ಬಹಳ ಸಂತೋಷದ ಸಂಗತಿಯಾಗಿದೆ. ನಾನು ಅನೇಕ ಸಂದರ್ಭಗಳಲ್ಲಿ ಇದೇ ವಿಷಯದ ಬಗ್ಗೆ ಹೇಳಿದ್ದೇನೆ, ಏನೆಂದರೆ ನಮ್ಮ ರಾಜ್ಯದಲ್ಲಿ ಫಾರೆಸ್ಟ್ ಬೆಲ್ಟ್ ಕಡಿಮೆಯಾಗುತ್ತಿದೆ. ಇನ್ನು ಮುಂದೆಯಾದರೂ ಅದಕ್ಕೆ ಅವಕಾಶ ಕೊಡಬೇಡಿ ಎಂದು. ಈಗ ಹಾಲಿ ಫಾರೆಸ್ಟ್ ವರ್ಲ್ಡ್ ಆವರೇಜ್ ೩೩ ಪರ್ಸೆಂಟ್ ಇದ್ದರೆ, ನಮ್ಮ ನ್ಯಾಷನಲ್ ಆವರೇಜ್ ೨೨ ಪರ್ಸೆಂಟ್ ಇದೆ. ಮತ್ತು ನಮ್ಮ ರಾಜ್ಯದ್ದು ಕೇವಲ ೧೫ ಪರ್ಸೆಂಟ್ ಇದೆ. ಪ್ರತಿವರ್ಷವೂ ಫಾರೆಸ್ಟ್‌ನ್ನು ನಾನಾ ಕಾರಣಗಳಿಂದ ಸರಂಡರ್ ಮಾಡುತ್ತಿದ್ದೀರಿ, ಇದರಿಂದ ಮುಂದೆ ಬಹಳ ತೊಂದರೆಯಾಗುತ್ತದೆಂದು ನಾನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ಈ ಬಗ್ಗೆ ನಮ್ಮ ನೆರೆಯ ರಾಜ್ಯಗಳಲ್ಲಿ ಎಷ್ಟು ಕ್ರಮ ತೆಗೆದು ಕೊಂಡಿದ್ದಾರೆಂಬುದನ್ನು ತಾವು ನೋಡಿ ಕೊಂಡು, ಅದರಂತೆ ಇಲ್ಲಿಯೂ ಕ್ರಮ ತೆಗೆದುಕೊಳ್ಳಲು ಈ ಬಿಲ್‌ನ್ನು ತಂದಿದ್ದೀರಿ.

ಉಪಾಧ್ಯಕ್ಷರು.—ತಾವು ಯಾವ ಬಿಲ್ ಬಗ್ಗೆ ಮಾತನಾಡುತ್ತಿದ್ದೀರಿ?

ಶ್ರೀ ಕೆ. ಆರ್ ಶ್ರೀನಿವಾಸಲು ನಾಯ್ಡು —ದಿ ಕರ್ನಾಟಕ ಪ್ರಿಸರ್‌ವೇಷನ್ ಆಫ್ ಟ್ರೀಸ್ ಬಿಲ್ ಬಗ್ಗೆ.

ಉಪಾಧ್ಯಕ್ಷರು.—ಈಗ ಆ ಬಿಲ್ ಬಗ್ಗೆ ಚರ್ಚೆ ನಡೆಯುತ್ತಿಲ್ಲ; ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

† ಶ್ರೀ ಕೆ ಎಫ್. ಪಾಟೀಲ್ (ಬ್ಯಾಡಿಗಿ) — ಮಾನ್ಯ ಉಪಾಧ್ಯಕ್ಷರೆ, ಅರಣ್ಯ ಸಂಪತ್ತು ಕಳ್ಳಸಾಗಾಣಿಕೆಯಾಗುವುದನ್ನು ತಡೆಗಟ್ಟುವ ಉದ್ದೇಶದಿಂದ ಮಾನ್ಯ ಮಂತ್ರಿಗಳು ಈ ವಿಧೇಯಕವನ್ನು ಈ ಸಭೆಯ ಮುಂದೆ ಮಂಡಿಸಿರುವುದು ಬಹಳ ಸಂಧರ್ಭವಾದುದಾಗಿದೆ. ಈ ಒಂದು ಕಾರ್ಯ ಕ್ರಮವನ್ನು ಈ ಮೊದಲೇ ಕೈಕೊಳ್ಳಬೇಕಾಗಿತೆಂದು ಕೆಲವು ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ಅವರುಗಳ ಒಂದು ಅಭಿಪ್ರಾಯವನ್ನು ನಾನೂ ಸಹ ಒಪ್ಪುತ್ತೇನೆ. ಈಗ ಅರಣ್ಯ ಸಂಪತ್ತಿನ ಕಳ್ಳಸಾಗಾಣಿಕೆ ಅನೇಕ ತರಹದಿಂದ ನಡೆಯುತ್ತಿದೆ. ತುರ್ತುಪರಿಸ್ಥಿತಿ ಇರತಕ್ಕಂಥ ಸಮಯದಲ್ಲಿ ಈ ಬಿಲ್‌ನ್ನು ತರಲಾಗಿದೆ. ಇಂತಹ ಬಹಳ ಹಿಂದಿನಿಂದ ನಡೆದುಕೊಂಡು ಬಂದಂಥ ಈ ವ್ಯವಹಾರವನ್ನು ತಡೆಗಟ್ಟುವ ಉದ್ದೇಶದಿಂದ ಈ ಬಿಲ್‌ನ್ನು ತರಲಾಗಿದೆ. ಈ ಎರಡು ಅಂಶಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ವಿಚಾರ ಮಾಡುವುದಾದರೆ, ಈಗ ಕೋರ್ಟಿನ ವ್ಯಾಪ್ತಿಗೆ ಒಳಪಡದಿರತಕ್ಕಂಥ ಅನೇಕ ಉಪಯುಕ್ತವಾದಂಥ ಕೆಲಸಗಳನ್ನು ನಾವು ಮಾಡುತ್ತಿದ್ದೇವೆ. ಹಾಗಿರುವಾಗ, ಕಳ್ಳಸಾಗಾಣಿಕೆಯಲ್ಲಿ ತೊಡಗಿದಂತಹ ವಾಹನವನ್ನು ಹಾಗು ಇತರೇ, ಸಲಕರಣೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ವಶಪಡಿಸಿಕೊಂಡಾಗ, ಅದರ ಮಾಲೀಕರು, ಯಾರು ಅದರ ವಿಜೆಂಟರು ಯಾರು ಎಂಬುದನ್ನೆಲ್ಲಾ ವಿಚಾರ ಮಾಡದೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಅದು ಕಳ್ಳಸಾಗಾಣಿಕೆಯ ಮಾಲು ಎಂಬುದು ಖಾತರಿಯಾದರೆ, ಅದನ್ನು ಕೂಡಲೇ ವಶಪಡಿಸಿಕೊಳ್ಳುವ ಹಕ್ಕನ್ನು ಮಂಟ್ಟುಗೋಲು ಹಾಕಿ ಕೊಳ್ಳುವುದಕ್ಕೆ ಅವಕಾಶವಿರಬೇಕು. ಹಾಗಿಲ್ಲದೆ, ನೋಟೀಸ್ ಕೊಟ್ಟು ಅದರ ಮಾಲೀಕರು ಯಾರು ಅದರ ವಿಜೆಂಟರು ಯಾರು ಎಂಬುದನ್ನು ಹುಡುಕುವುದಕ್ಕೆ ಹೊರಟರೆ ಆ ಕೆಸ್ ನಿಲ್ಲುವುದಿಲ್ಲ. ಇಷ್ಟು ದಿವಸದವರೆಗೆ ಇಂತಹ ಒಂದು ಕಾನೂನು ಇಲ್ಲದೆ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿತ್ತು; ಇನ್ನು ಮುಂದೆ ಈ ಕಾಯಿದೆಯ ಮೂಲಕವೇ ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಇಲ್ಲದಂತೆ ಮಾಡಿ ಕೊಡುತ್ತಿದ್ದೇವೆ. ಈಗಿನ ತಿದ್ದುಪಡಿಯ ಪ್ರಕಾರ ಎಲ್ಲರೂ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿದೆ. ಆ ಒಂದು ಅನುಮಾನ ನನಗೆ ಬರುತ್ತಿದೆ. ಇಂದು ಅರಣ್ಯ ಸಂಪತ್ತು ಕಳ್ಳಸಾಗಾಣಿಕೆಯಾಗುತ್ತಿರುವುದು ದೊಡ್ಡ ದೊಡ್ಡ ಫಾರೆಸ್ಟ್ ಕಂಟ್ರಾಕ್ಟರ್‌ಗಳ ಕಡೆಯಿಂದ ಮತ್ತು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಂದ ಎಂಬುದು ನನ್ನ ಕಲ್ಪನೆಯಾಗಿದೆ. ಯಾಲೋ ಕೆಲವರು ಊರುವಲು ಕಟ್ಟಿಗೆಗಾಗಿ ಒಂದು ಎತ್ತಿನ ಗಾಡಿಯಲ್ಲಿ ಅಥವಾ ಎರಡು ಎತ್ತಿನ ಗಾಡಿಯಲ್ಲಿ ಕಾಡಿನಿಂದ ಕಟ್ಟಿಗೆಗಳನ್ನು ತೆಗೆದುಕೊಂಡು ಬಂದರೆ ಅದರಿಂದ ಅರಣ್ಯ ಸಂಪತ್ತೇನೂ ಹೆಚ್ಚಿನ ರೀತಿಯಲ್ಲಿ ಹಾಳಾಗುವುದಿಲ್ಲ. ಇಂದು ಅರಣ್ಯಸಂಪತ್ತೆಲ್ಲಾ ನಾಶವಾಗುತ್ತಿರುವುದು ಮತ್ತು ಕಳ್ಳಸಾಗಾಣಿಕೆಯಾಗುತ್ತಿರುವುದು ದೊಡ್ಡ ದೊಡ್ಡ ಫಾರೆಸ್ಟ್ ಕಂಟ್ರಾಕ್ಟರ್‌ಗಳ ಕಡೆಯಿಂದ ಮತ್ತು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳ ಕಡೆಯಿಂದ ಎಂದು ಹೇಳಬಹುದು. ಇದನ್ನು ತಡೆಗಟ್ಟಿಲು ನಾವು ಅನೇಕ ಉಪಾಯಗಳನ್ನು ಕಂಡುಹಿಡಿಯಬೇಕಾಗಿದೆ: ಈ ಕೈಗಾರಿಕೋದ್ಯಮಿಗಳು ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತರಾದಂಥ ದೊಡ್ಡ ದೊಡ್ಡ ಅಧಿಕಾರಿಗಳನ್ನು ೨ ಸಾವಿರದಿಂದ ೪ ಸಾವಿರದವರೆಗೆ ಸಂಬಳ ಕೊಟ್ಟು ಪುನ: ನೇಮಕ ಮಾಡಿಕೊಂಡು ಅವರ ಸಹಾಯದಿಂದ ಅರಣ್ಯ ಸಂಪತ್ತನ್ನು ಕಳ್ಳಸಾಗಾಣಿಕೆ ಮಾಡುತ್ತಿದ್ದಾರೆ. ಇದರಿಂದ ಅರಣ್ಯವನ್ನು ಕಾಯುವಂತಹ ಸಿಬ್ಬಂದಿ ವರ್ಗದವರು ಈ ಅಧಿಕಾರಿಗಳ ಒಂದು ಅಜಿಕೆಗೆ ಬೀಳುವಂತಹ ಒಂದು ಅವಕಾಶವಿರುತ್ತದೆ. ಆದುಕ್ಕಾಗಿ ಒಂದು ವ್ಯಾಪಕತೆಯ ಬಿಲ್ಲನ್ನು ಇದರಲ್ಲಿ ತರುವುದು ಅವಶ್ಯಕವಿದೆಯೆಂದು ಹೇಳಿ ಮಾನ್ಯ ಸಚಿವರಾದ ಶ್ರೀ ಸಿ. ಎನ್ ಪಾಟೀಲ್ ಅವರಿಗೆ ಪುನ; ವಿನಂತಿ ಮಾಡಿಕೊಳ್ಳುತ್ತೇನೆ ಈ ಮಸೂದೆಯನ್ನು ಕೂಲಂಕಷವಾಗಿ ವಿಚಾರಮಾಡಿ ಈ ಬಿಲ್ ಪಾಸ್ ಮಾಡುವುದಕ್ಕೆ ಮುಂಚೆ ಹೆಚ್ಚು ಉಗ್ರವಾದಂಥ ಸೆಕ್ಷನ್‌ಗಳನ್ನು ಇದರಲ್ಲಿ ತರದಿದ್ದರೆ ಇನ್ನು ಹತ್ತಾರು ವರ್ಷಗಳಲ್ಲಿ ಅರಣ್ಯ ಸಂಪತ್ತು ಉಳಿಯುವುದಿಲ್ಲ ನಿಸರ್ಗದಲ್ಲಿ ಬೆಳೆಯತಕ್ಕದ್ದನ್ನು ಅನ್ಯಾಯವಾಗಿ ಹಾಳುಮಾಡಿ ವೈಯಕ್ತಿಕವಾಗಿ ಲಾಭ ಮಾಡುವಂಥ ಹಕ್ಕಾರಂ ಈಗ ಹೆಚ್ಚುಗೆ ಹುಟ್ಟಿಕೊಳ್ಳುತ್ತಿದ್ದಾರೆ. ಆದ್ದರಿಂದ ಅತಿ ಉಗ್ರವಾದ ಹಾಗೂ ವ್ಯಾಪಕವಾದ ಕ್ರಮಗಳನ್ನು ಇದರ ಬಗ್ಗೆ ತೆಗೆದುಕೊಳ್ಳಬೇಕೆಂದು ಹೇಳಿ ನಾನು ಈ ಬಿಲ್ಲಿಗೆ ಪೂರ್ಣ ಬೆಂಬಲವನ್ನು ಕೊಡುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮನಾಬಾದ್) —ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಫಾರೆಸ್ಟ್ ಸೆಕೆಂಡ್ ಅಮೆಂಡ್‌ಮೆಂಟ್ ಬಿಲ್ ಎಂದು ಇಲ್ಲಿ ತರಲಾಗಿದೆ. ಇದರ ಉದ್ದೇಶ ಮಾತ್ರ ಬಹಳ ಒಳ್ಳೆಯದು. ಇದು ಇನ್ನೂ ಬಹಳ ಬೇಗನೆ ಬರಬೇಕಾಗಿತ್ತು. ಇಷ್ಟಾದರೂ ಬೇಗ ಬಂದಿದೆಯಾಷ್ಟೆ

ರಿಂದ ನಾನು ಇದನ್ನು ಈಗ ಸ್ವಾಗತ ಮಾಡುತ್ತೇನೆ. ನಮ್ಮ ಅಧಿಕಾರಿಗಳಿಗೆ ಲೇಖನ ಚಾತುರ್ಯ ಶಕ್ತಿ ಇರುವುದರಿಂದ ಈ ಬಿಲ್ಲಿನಿಂದ ಇಂಥಾದ್ದನ್ನೆಲ್ಲಾ ಬರೆದು ಮಂತ್ರಿಯವರ ಬಾಯಲ್ಲಿ ಹೇಳಿಸುತ್ತಿದ್ದಾರೆ. ಆಗಬಾರದ್ದನ್ನು ಇದರಲ್ಲಿ ಬರೆಸಿ ಅದನ್ನ ಇಲ್ಲಿ ಇಂಪ್ಲಿಮೆಂಟ್ ಮಾಡತಕ್ಕ ಅಧಿಕಾರವರ್ಗ ಇದೆ. 71(ಎ) ಮತ್ತು (ಬಿ)ನಲ್ಲಿ ಮತ್ತು ಅದರ ಸಬ್‌ಕ್ಲಾಜ್‌ನಲ್ಲಿ ಸಾಕಾದಷ್ಟು ತಿದ್ದುಪಡಿಗಳು ಸೇರಿವೆ. ಅವುಗಳ ಪ್ರಗತಿಯನ್ನು ನೋಡಬೇಕಾಗಿದೆ. ಅದರಲ್ಲಿ ಸ್ಮಗಲರ್ಸ್ ವಿಚಾರವನ್ನು ಬಹಳವಾಗಿ ಹೇಳಿದ್ದಾರೆ. ಅದೇ ರೀತಿ ಅವರ ಅಸ್ತಿಪಾಸ್ತಿ ಹಾಗೂ ಜನತೆಯ ಅಸ್ತಿಪಾಸ್ತಿ ಮತ್ತೆ ಕೆಲವು ಎಜುಕೇಷನಲ್ ಇನ್‌ಸ್ಟಿಟ್ಯೂಷನ್‌ಗಳ ಆಸ್ತಿಪಾಸ್ತಿಗಳನ್ನು ನಗರದಲ್ಲಿ ಚಕ್ ಮಾಡುವುದಕ್ಕೆ ತಕ್ಕ ನಿಯಮಗಳನ್ನು ಮಾಡಿ ಅವನ್ನು ಪೂರ್ತಿಯಾಗಿ ವಾಟರ್ ಡೌನ್ ಮಾಡಬೇಕೆಂದು ನಾನು ಹೇಳುತ್ತೇನೆ ಈ ಮಸೂದೆಯಲ್ಲಿ ಎಷ್ಟೋ ಲೂಪ್‌ಹೋಲ್ಸ್ ಇವೆ. ಅವನ್ನು ಹೇಳಿಕೊಳ್ಳುವುದಕ್ಕೆ ಮುಂಚೆ 71(ಬಿ)ನಲ್ಲಿ (2)ನೇ ಭಾಗದಲ್ಲಿ ಹೇಳಿರುವುದನ್ನು ನಾನು ಇಲ್ಲಿ ಓದಿ ಹೇಳಬೇಕಾಗುತ್ತದೆ. ಅದೇನೆಂದರೆ,

> "Without prejudice to the provisions of Sub-section (1) no order confiscating any tool, rope, chain, boat, vehicle or cattle shall be made under Section 71A if the owner of the tools, rope, chain, boat, vehicle or cattle proves to the satisfaction of the authorised officer that it was used in carrying the timber, sandalwood, charcoal, firewood or ivory without the knowledge or connivance of the owner himself."

ಇದನ್ನು ಪ್ರೂವ್ ಮಾಡಿದರೆ ಸಾಕು. ಇದರಲ್ಲಿ ಏನಾಗಿದೆಯೆಂದರೆ ಓನರ್‌ಗೆ ಹೆಚ್ಚು ಅಧಿಕಾರ ಕೊಟ್ಟಂತಾಯಿತು. ಬೋಗಸ್ ಎವಿಡೆನ್ಸ್ ಕೊಡುವುದನ್ನು ನಿಲ್ಲಿಸುವಂಥ ಸ್ಕೋಪ್ ಇದರಲ್ಲಿ ಇರಬೇಕು ಲ್ಯಾಂಡ್ ರಿಫಾರಮ್ಸ್‌ನಲ್ಲಿಯೂ ಈ ರೀತಿಯಾಗಿ ಮಾಡಿದ್ದಾರೆ. ಅಂದಮೇಲೆ ಯಾವ ಕಡೆ ಬಿಲ್‌ನಲ್ಲಿ ಓದಿದರೂ ಇದರಲ್ಲಿ ಸೆಟ್ಸ್‌ಲ್ ಆಗಿ ನಡೆಯುತ್ತಿದೆ ಎಷ್ಟರಮಟ್ಟಿಗೆ ಇದರಲ್ಲಿ ಮಂತಾಪಲಿ, ಬ್ಲಾಕ್ ಮಾರ್ಕೆಟ್, ಸ್ಮಗಲರ್ಸ್ ಆಗಿ ಬರುತ್ತದೆ ಎಂಬುದನ್ನು ನೋಡಿದರೆ ಇದು ಪ್ರೋಗ್ರೆಸೀವ್ ಕ್ರಮ ಆಗುತ್ತದೆಯೇ ಅಂದರೆ ಇಲ್ಲ. ಇದರ ಪ್ರಕಾರ ಯಾವ ಕ್ರಮವನ್ನು ತೆಗೆದುಕೊಂಡರೂ ಸ್ಮಗಲರ್ಸ್‌ಗೆ ಲಾಭ ಬರುತ್ತದೆ. ಅಂದಮೇಲೆ ಇದರ ಪ್ರಕಾರ ಮಾನ್ಯ ಸಭಾ ಸದಸ್ಯರಿಗೂ ಆ ರೀತಿಯಾಗಿ ಲಾಭ ಬಂದರೆ ಅದೇನು ತಪ್ಪ ? ಆದ್ದರಿಂದ ಮಾನ್ಯ ಅರಣ್ಯ ಸಚಿವರು 71(ಬಿ)ಗೆ ಈಗ ಒಂದು ತಿದ್ದುಪಡಿಯನ್ನು ಏನು ತಂದಿದ್ದಾರೆ ಅದನ್ನು ಪೂರ್ತಿಯಾಗಿ ಡಿಲೀಟ್ ಮಾಡಬೇಕು. ಅದರ ಬದಲು 71 (ಎ) ತಿದ್ದುಪಡಿ ಇಟ್ಟುರೆ ಸಾಕು. ಈಗ ಸರಿಯಾದ ಎಸ್ಕ್ವೈರಿ ಇಲ್ಲ, ಕ್ವಾಸಿ ಜುಡಿಷಿಯರಿ ಪ್ರೊಸೀಡಿಂಗ್ಸ್ ಇಲ್ಲ, ಸಿಕ್ಕಿದವರು ಬಲ್ಲಿ ದೋಚಿಕೊಂಡು ಹೋಗುತ್ತಿದ್ದಾರೆ. ಈ ಕಾರಣದಿಂದಾಗಿ ಈಗ ಕಾಡು ಪ್ರದೇಶವೆಲ್ಲಾ ಬಯಲು ಪ್ರದೇಶವಾಗುತ್ತಾ ಇದೆ. ಯಾರು ಸ್ಮಗಲ್ ಮಾಡುತ್ತಾ ಇದ್ದಾರೆ ಜಂತಪವರ ಆಸ್ತಿ ಏನು ಸಿಗುತ್ತದೆಂದರೆ ಅವರುದಂಡ್ಡು ಕೊಡುವುದಿಲ್ಲ. ಅಪತಿಂದ ಲಾರಿ ಸಿಗುತ್ತದೆ. ಬಂಡಿ ಸಿಗುತ್ತದೆ ಮತ್ತು ಎಡಿಯ ಎತ್ತುಗಳು ಸಿಗುತ್ತವೆ ಅಷ್ಟೆ. ನಾನು ಮೊದಲೇ ಹೇಳಿದ ಹಾಗೆ 71(ಬಿ) ಯನ್ನು ಈಗ ಡಿಲೀಟ್ ಮಾಡಿದರೆ ನಿಜವಾಗಿಯೂ ಸ್ಮಗಲರ್ಸ್‌ಗೆ ನೀರು ಕುಡಿಸುವುದೂ ಆಗುತ್ತದೆ. ಅಂತಹವರಿಗೆ ನೀರು ಕುಡಿಸ ಬೇಕೆಂದಿರುವಾಗ ಅಂತಹವರಿಗೆ ಅನುಕೂಲ ಮಾಡಿಕೊಡುವ ಪ್ರಾವಿಷನ್ ಇಲ್ಲಿ ಏಕೆ ಇಟ್ಟಿರಿ ಎಂಬುದಾಗಿ ನಾನು ಸಚಿವರಿಗೆ ಕೇಳುತ್ತೇನೆ. ಆಪರ ಮೋಡ್ ಆಫ್ ಆಕ್ಷನ್ ಈಗ ನಮ್ಮ ಕಡೆ ಬಹಳ ಜಾಸ್ತಿಯಾಗಿದೆ. ಚಿಂಚೋಳಿ ತಾಲ್ಲೂಕಿನಲ್ಲಿ ಇದು ಈಗ ಬಹಳವಾಗಿದೆ. ಬಿದರ್, ಗುಲ್ಬರ್ಗಾ ಜಿಲ್ಲೆಗಳಲ್ಲಿ ಆದರಲ್ಲಿಯೂ ಹೈದರಾಬಾದ್ ಕರ್ನಾಟಕದಲ್ಲಿ ಪೂರ್ತಿಯಾಗಿ ಕಾಡನ್ನು ಹಾಳು ಮಾಡುವುದಕ್ಕೆ ಪೆಚ್ಚಿಗೆ ಸ್ಕೋಪ್ ನೀವೇ ಈ ಮಸೂದೆಯಲ್ಲಿ ಕೊಡುತ್ತಿದ್ದೀರಿ. ನನಗೆ ತಿಳಿದ ಹಾಗೆ ಸ್ಮಗಲರ್ಸ್, ಬೋಗಸ್ ಎವಿಡೆನ್ಸ್ ತರುತ್ತಾರೆ. ಅದು ಹೇಗೆ ಸಾಧ್ಯವೆಂದು ಕೆಲವರಿಗೆ ಅನ್ನಿಸಿರಬಹುದು. ಚಿಂಚೋಳಿ ತಾಲ್ಲೂಕಿನಲ್ಲಿ ಇಂತಹ ನಿದರ್ಶನಗಳು ಬೇಕಾದಷ್ಟಿವೆ. ಅಲ್ಲಿ ಟೀಕ್‌ವುಡ್ಡನ್ನು ಅನೇಕರು ಕದ್ದುಕೊಂಡು ಹೋಗುತ್ತಾರೆ. ಅನೇಕ ಜನ ಫಾರೆಸ್ಟ್ ಕಾಂಟ್ರಾಕ್ಟರ್ಸ್ ಅನೇಕ ಜಾತಿಯ ಮರಗಳನ್ನು ಸ್ಮಗಲ್ ಮಾಡುತ್ತಾರೆ. ಇಂತಹ ಬ್ಯೂಟಿಲ್ ಕ್ರಿಮಿನಲ್ ಬಹಳ ಅನ್ಯಾಯವಾಗುತ್ತಿದೆ. ಇದಕ್ಕೆ ಸರ್ಕಾರದವರು ಅಸ್ಪದ ಕೊಡುತ್ತಿದ್ದಾರೆ ಇಂತಹದನ್ನು ತಡೆಗಟ್ಟುವುದಕ್ಕೆ ಮೆತ್ತನೆಯ ಕಟ್ಟಿಗೆ, ಕೋಲು ಬೇಕಾಗಿರುವುದಿಲ್ಲ, ಉಕ್ಕಿನ ಕಡಗವೇ ಬೇಕಾಗುತ್ತದೆ. ಅದಕ್ಕೆ ಸರಿಯಾದ ಪ್ರಾವಿಷನ್ ಇರಬೇಕು, ಒಟ್ಟಿನಲ್ಲಿ 71 (ಬಿ) ಸೆಕ್ಷನ್ ಏನಿಟ್ಟಿದ್ದೀರಿ ಅದನ್ನು ನಾನು ಓದಿದ್ದೇನೆ. ಇದರಲ್ಲಿ ಬೋಗಸ್ ಎವಿಡೆನ್ಸ್ ತರುವುದಕೆ ಅವಕಾಶವಿದೆ. ಇದು ಏನೂ

ಪೈಪ್ಲೈಜ್ ಇಷ್ಯೂ ಆಗುವುದಿಲ್ಲ. ಈ ಕ್ಲಾಜನ್ನು ತೆಗೆದರೆ ನಿಜವಾಗಿಯೂ ಇದು ಈಗ ಪ್ರೊಗ್ರೆಸೀವ್ ಲೆಜಿಸ್ಲೇಷನ್ ಆಗುತ್ತದೆಂದು ಹೇಳಿ ನಾನು ಈ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ನಮ್ಮ ದೇಶದಲ್ಲಿ ನಾವು ತಿಳಿದುಕೊಂಡಿರುವ ಹಾಗೆ ತಾವು ವಕೀಲರಾಗಿ ಕೆಲಸಮಾಡಿರುವವರು. ತಮ್ಮ ಅನುಭವಕ್ಕೆ ಬಂದಿರುವ ವಿಷಯವೇನೆಂದರೆ, ಸಾಕ್ಷಿಗಳನ್ನು ಯಾವ ಮೊಕದ್ದೆಮೆಗಳಲ್ಲಿಯೇ ಆಗಲೀ ಸೃಷ್ಟಿಮಾಡುವುದು ಸಾಧ್ಯವಾದ ಕೆಲಸವಲ್ಲ. ವಾಹನಗಳ ಮಾಲೀಕರು ಎನ್ನುವವರು ಸಾಮಾನ್ಯವಾಗಿ ಸಮಾಜದಲ್ಲಿ ಪ್ರತಿಷ್ಠೆ ಇಟ್ಟುಕೊಂಡಿರುವವರು ಅವರ ಕೈಕೆಳಗೆ ನೂರಾರು ಜನ ಕೆಲಸಗಾರರು ಇರುತ್ತಾರೆ. ಅಂತಹವರು ತಮ್ಮ ವಾಹನಗಳಲ್ಲಿ ಕಳ್ಳಸಾಗಾಣಿಕೆ ಮಾಡತಕ್ಕದ್ದನ್ನು ತಮಗೆ ತಿಳಿಯದೆ ಏನಾದರೂ ಉಪಯೋಗವಾಯಿತು ಎನ್ನತಕ್ಕ ವಿಚಾರದಲ್ಲಿ ರುಜುವಾತು ಕೊಡುವುದು ಕಷ್ಟವಾಗುವುದಿಲ್ಲ. ಮಾನ್ಯ ಶ್ರೀ ಸಿ.ಎನ್. ಪಾಟೀಲ್ ಅವರಿಗೆ ಗೊತ್ತಿರುವ ಹಾಗೆ ಸುಳ್ಳು ಸಾಕ್ಷಿಗಳನ್ನು ಒಪ್ಪರಮಟ್ಟಿಗೆ ಸೃಷ್ಟಿಮಾಡಿ ಕೋರ್ಟುಗಳಲ್ಲಿ ವಿಚಾರಣೆಗೆ ತರುತ್ತಾರೆಂಬುದು ಎಲ್ಲರಿಗೂ ಗೊತ್ತಿರುವ ಅಂಶವಾಗಿದೆ. ಒಂದು ವಿಚಾರವನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕು, ಅವರೇನು ಸಾಮಾನ್ಯ ಜನರಲ್ಲ ಕಳ್ಳಸಾಗಾಣಿಕೆ ಜನರನ್ನು ಖಿದೀಪಂರೆಂಬುದಾಗಿ ದೃಷ್ಟಿಯಲ್ಲಿಟ್ಟುಕೊಂಡು ಈ ಕಾಯಿದೆಯನ್ನು ಮಾಡುತ್ತಿದ್ದೀರಿ ಅದು ಒಳ್ಳೆಯದು ಆದರೆ ಸಾಕ್ಷಿದಾರರನ್ನು ಬೇಕಾದರೆ ತರಬಹುದು. ಕಾನೂನಿನ ಚೌಕಟ್ಟಿನಲ್ಲಿ ಇಂತಿಂಥ ಪ್ರಾವಿಷನ್ ಇಲ್ಲವೆಂದು ತೋರ್ಪಡಿಸುವುದಕ್ಕೆ ಏನೇನು ಪ್ರಯತ್ನಗಳನ್ನು ಮಾಡಬೇಕೋ ಅದನ್ನು ಮಾಡತಕ್ಕ ಜನರು ಅವರು. ಆದ್ದರಿಂದ ನಮ್ಮ ಗೆಳೆಯರು ಈಗಾಗಲೇ ಹೇಳಿರುವ ಪ್ರಕಾರ 71 (ಬಿ) ಕ್ಲಾಜು ಇದರಲ್ಲಿ ಏನು ಸೇರಿದೆಯೋ ಅದು ಈ ತಿದ್ದುಪಡಿ ಮಸೂದೆಯು ಉದ್ದೇಶಕ್ಕೆ ಕುಟಿಲಪ್ರಾಯವಾಗಿರುವುದರಿಂದ ಮತ್ತು ಇದರ ಒಂದು ಉದ್ದೇಶ ಈಡೇರದೇ ಹೋಗುವುದರಿಂದ ನಿಮ್ಮ ಉದ್ದೇಶವೆಲ್ಲವೂ ಈ ಒಂದು ತಿದ್ದುಪಡಿಯ ಪ್ರಕಾರ ಪೂರ್ತಿಯಾಗಿ ಈಡೇರಬೇಕಾದರೆ ಈ ಒಂದು ಕ್ಲಾಜನ್ನು ತೆಗೆಯಬೇಕೆಂದು ನನ್ನ ವಿಚಾರ. ಆದ್ದರಿಂದ ಈ ಒಂದು ವಿಚಾರದಲ್ಲಿ ಮಾನ್ಯ ಮಂತ್ರಿಗಳು ಪುನರ್ವಿಮರ್ಶೆ ಮಾಡಿ ಮುಂದೆ ಇದರಿಂದ ಆಗತಕ್ಕ ಅಪಾಯವೇನಿದೆಯೋ ಅದನ್ನು ಕೂಡಲೇ ತಪ್ಪಿಸಬೇಕು. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಬಗ್ಗೆ ಈ ಕಾನೂನಿನಲ್ಲಿ ನೀವು ಯೋಚನೆ ಮಾಡುತ್ತಾ ಇಲ್ಲ, ಒಬ್ಬ ಕಳ್ಳಸಾಗಾಣಿಕೆ ಮಾಡುವವನ ಬಗ್ಗೆ ಆಗತಕ್ಕ ಆಪಘಾತವೇನು, ಅಂತಹ ಒಬ್ಬ ಅಪರಾಧಿಯ ಮೇಲೆ ಯಾವ ಕ್ರಮ ತೆಗೆದುಕೊಳ್ಳಬೇಕೆಂದು ಯೋಚನೆಮಾಡುತ್ತಾ ಇರುವುದರಿಂದ ಅವನು ಯಾವ್ಯಾವ ಸಾಧನೆಗಳನ್ನು ಮತ್ತು ಪ್ರಯತ್ನಗಳನ್ನು ತರಬಲ್ಲ ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಚಾರ ಮಾಡಿದರೆ ಒಳ್ಳೆಯದು ಒಟ್ಟಿನಲ್ಲಿ ನಿಮ್ಮ ಮಸೂದೆಯ ಉದ್ದೇಶ ಈಡೇರಬೇಕಾದರೆ 71(ಬಿ) ಕ್ಲಾಜ್ ಏನಿದೆಯೋ ಅದನ್ನು ತೆಗೆಯಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ನಾವು ಅನೇಕ ಸಂದರ್ಭಗಳಲ್ಲಿ ಸರ್ಕಾರಕ್ಕೆ ತೀವ್ರವಾಗಿ ಎಚ್ಚರಿಕೆ ಕೊಡುತ್ತಾ ಬಂದಿದ್ದೇವೆ ಮುಖ್ಯವಾಗಿ ನಮ್ಮ ದೇಶದಲ್ಲಿ ಇರತಕ್ಕಂಥ ಅರಣ್ಯ ಸಂಪತ್ತು ಕ್ಷೀಣವಾಗಿರತಕ್ಕಂಥ ಪರಿಸ್ಥಿತಿಯಲ್ಲಿ ಅನೇಕ ಸಾರಿ ಸರ್ಕಾರವನ್ನು ನಡೆಸತಕ್ಕಂಥ ಆಡಳಿತಪಕ್ಷದ ಮೇಲೆ ಹಾಗೂ ಆಡಳಿತ ಸೂತ್ರಗಳನ್ನು ಹಿಡಿದಿರತಕ್ಕಂಥವರ ಮೇಲೆ ಹಾಗೂ ಅವರ ಅಧಿಕಾರಿಗಳ ಮೇಲೆ ಗುರುತರವಾದ ಆಪಾದನೆಗಳನ್ನು ಮಾಡಿರತಕ್ಕಂಥಾದ್ದುಂಟು. ಇದು ಎಲ್ಲವನ್ನೂ ನೋಡುತ್ತಾ ಹೋದರೆ ಮಾನ್ಯ ಮಂತ್ರಿಗಳು ಈ ತಿದ್ದುಪಡಿಯನ್ನು ತರುತ್ತಾರೆಂದು ಬಹಳ ಕಾತುರವಾಗಿ ನೋಡುತ್ತಿದ್ದೆ. ಹಿಂದೆ ನಾವು ಈ ಸಭೆಯಲ್ಲಿ ಚರ್ಚೆಮಾಡಿ ಇದರ ಬಗ್ಗೆ ಬೇಕಾದಷ್ಟು ಆರೋಪಪಟ್ಟಿಯನ್ನು ವ್ಯಕ್ತಪಡಿಸಿದ್ದೇವೆ. ಯಾವರೀತಿ ಅರಣ್ಯ ಸಂಪತ್ತು ಹಾಳಾಗಿ ಹೋಗುತ್ತಾ ಇದೆ, ಅದಕ್ಕೆ ಈ ಕಾಯಿದೆ ನೆರವಾಗುತ್ತದೆ ಎಂದೂ ಭಾವಿಸಿದ್ದೆ. ಅದರಲ್ಲಿ ನನ್ನ ಆಸೆ ಮತ್ತು ಕಳವಳ ಇದರಲ್ಲಿ ಪ್ರತ್ಯೇಕವಾಗಿ ಇದೆ. ಹಿಂದೆ ಯಾವುದು ಅಕ್ರಮವಾಗಿ ನಡೆಯುತ್ತಿತ್ತೊ ಅದು ಈಗ ಸಕ್ರಮವಾಗಿ ನಡೆಯುವುದಕ್ಕೆ ಇದು ಅವಕಾಶ ಮಾಡಿ ಕೊಟ್ಟಂತಾಗುತ್ತದೆ. ಇದರಲ್ಲಿ ಅವರು ಕಾನೂನು ರೀತಿಯಲ್ಲಿ ತಪ್ಪಿಸಿಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದೆ ಎಂದು ಹೇಳಬೇಕಾಗುತ್ತದೆ ನಮ್ಮ ದೇಶದಲ್ಲಿ ಇರತಕ್ಕಂಥ ಅರಣ್ಯ ಸಂಪತ್ತು ಆಡಳಿತದ ಪಕ್ಷದ ಮತ್ತು ಆಡಳಿತ ಸೂತ್ರಗಳನ್ನು ಹಿಡಿದಿರುವವರು ಮೇಯುವ ಮೈದಾನವಾಗಿದೆ. ಆದ್ದರಿಂದ ಅದನ್ನು ತಪ್ಪಿಸುವುದಕ್ಕೆ ಆಗುತ್ತಾ ಇಲ್ಲ ಮೊನ್ನೆ ಪಿ.ಎ.ಸಿ. ರಿಪೋರ್ಟಿನಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಪ್ರಕರಣವನ್ನು ಕೊಟ್ಟಿದೆ. ಒಬ್ಬ ಡಿವಿಜನಲ್ ಫಾರೆಸ್ಟ್ ಆಫೀಸರ್ ಕಂಟ್ರಾಕ್ಟರ್ ಜೊತೆಯಲ್ಲಿ ಸಾಮಿಲಾಲಿ 22 ಲಕ್ಷ ರೂಪಾಯಿ ನಷ್ಟವನ್ನು

ಸರ್ಕಾರಕ್ಕೆ ಉಂಟುಮಾಡಿದ್ದ ಸಭೆಯ ಮುಂದೆ ಇದೆ ಮತ್ತು ದೇಶದ ಮುಂದೆಯೂ ಕೂಡ ಇದೆ ಅವರ ಮೇಲೆ ಇಲ್ಲಿಯವರೆಗೆ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೆ ಹಿಂದುಮುಂದೆ ನೋಡುತ್ತಿದ್ದಾರೆ. ಈ ಒಂದು ಕಳ್ಳಸಾಗಾಣಿಕೆಗೆ ಉಪಯೋಗಿಸುವ ವಾಹನ ಸೌಕರ್ಯಗಳನ್ನು ಯಾರು ಉಪಯೋಗಿಸುತ್ತಿದ್ದಾರೆ ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಅಮೆಂಡ್‌ಮೆಂಟನ್ನು ಇದರಲ್ಲಿ ತಂದಿದ್ದೀರಿ? ಆದರೆ ನಾನು ಮೇಲೆ ಹೇಳಿದ ಹಾಗೆ ಅಕ್ರಮವಾಗಿ ಏನು ನಡೆಯುತ್ತಿತ್ತು ಅದು ಇವತ್ತಿನ ದಿವಸ ಸಕ್ರಮವಾಗಿ ನಡೆಯುವುದಕ್ಕೆ ಇದರಲ್ಲಿ ಅವಕಾಶ ಕೊಟ್ಟಂತಾಗುತ್ತದೆ. ಇದರಲ್ಲಿ ಬಹಳ ಪ್ರಭಾವಯುತವಾಗಿರುವ ಜನ ಅವರ ಪ್ರಭಾವವನ್ನು ಬೀರಿ ಅರಣ್ಯವನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಆ ರೀತಿ ಇದ್ದರೂ ಸರ್ಕಾರ ಈ ರೀತಿಯ ತಿದ್ದುಪಡಿಯನ್ನು ತಂದಿರತಕ್ಕಂಥಾದ್ದು ಬಹಳ ವಿಷಾದನೀಯವಾದುದು. ದೇಶದಲ್ಲಿ ಅನೇಕ ಜನ ಕಾಫಿ-ಪೋಸಾ, ಮಿಸಾ ಕಾನೂನು ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾ ಇರಲಿಲ್ಲ. ಯಾವಾಗ ಏಮರ್ಜನ್ಸಿ ಬಂತು ಅದು ಬಂದ ಮೇಲೆ ಆ ಕಾನೂನಿನಲ್ಲಿ ಒಳಪಡಿಸಿ ಯಾರು ಸಮಾಜಘಾತುಕ ವ್ಯಕ್ತಿಗಳು ಇದ್ದರು ಅವರ ಮೇಲೆ ಕಠಿಣವಾದ ಕಾನೂನನ್ನು ತಂದು ಅಷ್ಟೇ ಕಠಿಣವಾದ ಶಿಕ್ಷೆಯನ್ನು ಕೊಡುವುದಕ್ಕೆ ಸಾಧ್ಯವಾಯಿತು. ಇದೇ ತರಹದ ಶಕ್ತಿಗಳು ಇವತ್ತು ಅರಣ್ಯ ಸಂಪತ್ತನ್ನು ಲೂಟಿ ಮಾಡುವುದರಲ್ಲಿ ತೊಡಗಿದ್ದಾರೆ. ಅಂತಹವರಿಗೆ ಕರುಣೆ ಮತ್ತು ದಯೆ ತೋರುವುದಕ್ಕೆ ಅನುಕೂಲವಾಗುವಂತಹ ಈ ಕಾನೂನನ್ನು ಈ ಸರ್ಕಾರ ಏಕೆ ತಂದಿದೆಯೆಂದು ನನಗೆ ಅರ್ಥವಾಗುವುದಿಲ್ಲ ಇದನ್ನು ಪ್ರೂಪ್ ಮಾಡುವುದಕ್ಕೆ ಆ ವಾಹನಗಳಿಗೆ ಓನರ್ ಯಾರು ಮತ್ತು ಸಲಕರಣೆಗಳಿಗೆ ಮಾಲೀಕರು ಯಾರು ಇರುತ್ತಾರೆ ಅವರು ಕೂಡ ಇದರಲ್ಲಿ ಸಹಕರಿಸಿದ್ದಾರೆ. ಇದರಲ್ಲಿ ಭಾಗಸ್ತರೇ ಎಂದು ಸಾಬೀತು ಆಗುವವರೆಗೆ ಕಾನ್‌ಫಿಸ್ಕೇಷನ್ ಆರ್ಡರ್ ಊರ್ಜಿತವಾಗುವುದಿಲ್ಲ. ಅರಣ್ಯ ಸಂಪತ್ತು ಲೂಟಿ ಮಾಡುವುದಕ್ಕೆ ಯಾರು ಕಾರಣರಾಗಿದ್ದಾರೆ ಅವರಿಗೆ ಅನುಕೂಲ ಮಾಡುವ ರೀತಿ ಮಂತ್ರಿಗಳು ಈ ಕಾನೂನನ್ನು ತಂದಿದ್ದಾರೆನೋ ಎನ್ನುವ ಹಾಗೆ ಭಾಸವಾಗುತ್ತದೆ. ಜೊತೆಗೆ ಅವರ ಪ್ರಭಾವ ನೇರವಾಗಿ ಮಂತ್ರಿಗಳ ಮೇಲೂ ಇದೆಯೋ ಏನೋ ನನಗೆ ಅರ್ಥವಾಗುತ್ತಿಲ್ಲ. ಈ ಕಾನೂನನ್ನು ನೋಡಿದರೆ ಅನುಮಾನ ಬರುತ್ತದೆ. ಬೆನಿಫಿಟ್ ಆಫ್ ಡೌಟ್ ಈ ಪರಿಸ್ಥಿತಿಯಲ್ಲಿ ಬರಬಾರದು. ಯಾರು ತಪ್ಪು ಮಾಡುತಾರೆ ಅವರಿಗೆ ಉಗ್ರವಾದ ಶಿಕ್ಷೆ ಆಗಬೇಕು. ಈ ರೀತಿಯಲ್ಲಿ ಇರಬೇಕು. ದುರದೃಷ್ಟವಶಾತ್ ಸರ್ಕಾರ ತಂದಿರತಕ್ಕ ತಿದ್ದುಪಡಿಯನ್ನು ನೋಡಿದರೆ ಅರಣ್ಯವನ್ನು ರಕ್ಷಣೆ ಮಾಡ ಬೇಕೆಂದು ಏನು ಉದ್ದೇಶ ಇದೆ ಅದು ಹೋಗಿ ಇಲ್ಲಿಯವರೆಗೆ ಏನು ಅಕ್ರಮವಾಗಿ ನಡೆಯುತ್ತಿತ್ತು, ಅದು ಈಗ ಸಕ್ರಮವಾಗಿ ನಡೆಸುವುದಕ್ಕೆ ಅವಕಾಶವಾಗತಕ್ಕ ರೀತಿಯಲ್ಲಿ ತಿದ್ದುಪಡಿಯನ್ನೂ ಸರ್ಕಾರದವರು ತಂದಿದ್ದಾರೆಂದು ಹೇಳಬೇಕಾಗುತ್ತದೆ. ಮತ್ತೊಮ್ಮೆ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ ಅರಣ್ಯ ಸಂಪತ್ತನ್ನು ದೇಶದ ಸಂಪತ್ತೆಂದು ನೋಡಿಕೊಳ್ಳಬೇಕು, ಜೊತೆಗೆ ಮುಂದಿನ ಪೀಳಿಗೆಗೆ ಅದು ಶಾಪವಾಗಿ ಪರಿಣಮಿಸಬಾರದೆಂದು ಇದ್ದರೆ ಈ ತಿದ್ದುಪಡಿಯಲ್ಲಿ ಇರುವ ೭೧(ಬಿ)ಯನ್ನು ದಯವಿಟ್ಟು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ಹಾಳುಮಾಡತಕ್ಕಂಥ ಜನ ಯಾರು ಎಂದರೆ ದೊಡ್ಡ ದೊಡ್ಡ ಕಂಪನಿಗಳನ್ನು ನಡೆಸುತಕ್ಕಂಥವರು. ಅದಕ್ಕೆ ಏನು ವಾಹನಗಳನ್ನು ಉಪಯೋಗಿಸುತ್ತಿದ್ದಾರೆ ಅದರ ಮಾಲೀಕರು ಬಾಂಬೆಯಲ್ಲಿ ಇದ್ದುಕೊಂಡು ಗಂಧದ ಮರವನ್ನು ಸಾಗಾಣಿಕೆ ಮಾಡುತ್ತಿರುವ ಅನೇಕ ನಿದರ್ಶನಗಳನ್ನು ಕೊಡಬಹುದು. ನಮ್ಮ ರಾಜ್ಯದಿಂದ ಉತ್ತರ ಪ್ರದೇಶದವರೆಗೆ ಸಾಗಾಣಿಕೆ ನಡೆಯುತ್ತಿದೆ ಎಂದು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಲಾರಿಗಳ ಮೂಲಕ ಶಿವಮೊಗ್ಗಾದಿಂದ ಗಂಧದ ಮರವನ್ನು ಫಾರೆಸ್ಟ್‌ನಿಂದ ಸಾಗಿಸಬೇಕಾದರೆ ನಮ್ಮ ಫಾರೆಸ್ಟ್ ಇಲಾಖೆಯ ಅಧಿಕಾರಿಗಳು ಏನು ಮಾಡುತಿರುತ್ತಾರೆ ಎಂದು ಕೇಳಬೇಕಾಗುತ್ತದೆ. ಇಂತಹವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಬೇಕಾಗುತ್ತದೆ. ಕಾನೂನು ರೀತಿಯಲ್ಲಿ ಆಗಬೇಕಾಗಿರತಕ್ಕಂಥ ಶಿಕ್ಷೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಕ್ಕೆ ಏನು ಬೇಕೊ ಅದಂ ಈ ತಿದ್ದುಪಡಿಯಲ್ಲಿದೆಯೆಂದು ಹೇಳಬೇಕಾಗುತ್ತದೆ ಮಾನ್ಯ ಮಂತ್ರಿಗಳ ಮೇಲೂ ಪ್ರಭಾವ ಬೀರತಕ್ಕಂಥ ವ್ಯಕ್ತಿಗಳು ಇದ್ದಾರೆಂದು ತಿಳಿದುಕೊಳ್ಳಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಮಾತ್ರ ಅವರ ಜೇಬಿನಲ್ಲಿ ಯಾವ ರೀತಿಯಿಂದಲೂ ಸೇರಿಕೊಳ್ಳುವಂತೆ ಆಗಕೂಡದು ಎಂದು ಹೇಳುತ್ತೇನೆ. ಈ ವಿಷಯವಲ್ಲಿ ದೇಶಕ್ಕೂ ಗೊತ್ತಿದೆ. ಯಾರು ಸ್ಮಗಲಿಂಗ್, ಕಳ್ಳ ವ್ಯಾಪಾರವನ್ನು ಇಟ್ಟುಕೊಂಡಿದ್ದಾರೆ ಅವರ ಜೇಬಿನಲ್ಲಿ ಇವರು ಇರುವಂತೆ ಎಲ್ಲರಿಗೂ ಅನುಮಾನ ಬರುವ ರೀತಿಯಲ್ಲಿ ಈ ತಿದ್ದುಪಡಿಯನ್ನು ತಂದಿದ್ದಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಈ ತಿದ್ದುಪಡಿಯಲ್ಲಿರುವ

೭೧(ಬಿ)ಯನ್ನು ವಾಪಸ್ ತೆಗೆದುಕೊಳ್ಳದೆ ಹೋದರೆ ಅವರು ಜೇಬಿನಲ್ಲಿ ತಾವು ಇದ್ದಿರೆಂದು ಆರೋಪವನ್ನು ಹೊರಿಸಬೇಕಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಅವನ್ನು ತೆಗೆಯುವುದಕ್ಕೆ ಮನಸ್ಸು ಮಾಡಬೇಕು ಎಂದು ಹೇಳುತ್ತೇನೆ. ಇದರಿಂದ ಸರ್ಕಾರಕ್ಕೆ ಮಂತು ದೇಶಕ್ಕೆ ಒಳ್ಳೆಯದಾಗಲೆಂದು ಮಂತು ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲಿ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P. M.

† ಶ್ರೀ ಸಿ. ಎನ್. ಪಾಟೀಲ್.—ಮಾನ್ಯ ಸಭಾಪತಿಗಳೇ, ಇದುವರೆಗೂ ಶ್ರೀ ಶಾಮಣ್ಣನವರು ಪಾಗೂ ಇತರ ಸದಸ್ಯರು ಈಗ ನಾನು ತಂದಂಥ ತಿದ್ದುಪಡಿಯ ಮೇಲೆ ಮಾತನಾಡುತ್ತಾ ಸಾಕಷ್ಟು ಈ ಒಂದು ಸಭೆಯ ಗಮನವನ್ನು ಸೆಳೆದಿದ್ದಾರೆ. ಈ ಒಂದು ತಿದ್ದುಪಡಿಯಲ್ಲಿ ಕ್ಲಾಜ್ ೭೧(ಬಿ)ಯನ್ನು ತೆಗೆದುಹಾಕಬೇಕೆಂದು ಕೂಡ ಮಾನ್ಯ ಸದಸ್ಯರು ಈ ಸಭೆಗೆ ವಿನಂತಿಸಿಕೊಂಡಿದ್ದಾರೆ. ಯಾವ ಕಾರಣದಿಂದಲೂ ಈ ಒಂದು ೭೧(ಬಿ) ಕ್ಲಾಜನ್ನು ತೆಗೆದು ಹಾಕಲು ಸರ್ಕಾರಕ್ಕೆ ಸಾಧ್ಯವಿಲ್ಲ ಎನ್ನುವುದಕೋಸ್ಕರ ನಾವು ಒಂದೆರಡು ಕಾರಣಗಳನ್ನು ಕೊಡಬೇಕಾಗುತ್ತದೆ.

ಈಗ ನಾವು ತಂದ ತಿದ್ದುಪಡಿಯ ಮೇಲೆ ಮಾನ್ಯ ಸದಸ್ಯರು, ಕ್ಲಾಜ್ ೭೧(ಬಿ)ರಲ್ಲಿರುವ ಪ್ರಕಾರ ಒಂದು ಶೋಕಾಸ್ ನೋಟೀಸ್‌ನ್ನು ಕೊಡುವುದಕ್ಕೆ ಪ್ರಾವಿಜನ್ ಇಟ್ಟುಕೊಂಡಿದ್ದೀರಿ, ಆ ಒಂದು ಪ್ರಾವಿಜನ್‌ನಿಂದ ಬಹುತೇಕ ವೆಹಿಕಲ್ಸ್ ಓನರ್ಸ್‌ಗೆ ಸಾಕಷ್ಟು ಕಾಲಾವಕಾಶವನ್ನು ಕೊಟ್ಟಿದ್ದೀರಿ ಮತ್ತು ಕೇಸ್‌ನ್ನು ತಮಗೆ ಅನುಕೂಲವಾಗುವ ರೀತಿಯಲ್ಲಿ, ತಮಗೆ ಅನುಕೂಲವಾಗುವ ರೀತಿಯಲ್ಲಿ ಕೇಸ್ ಡಿಸೈಡ್ ಆಗಲು ಅವಕಾಶ ದೊರಕುತ್ತದೆ ಎನ್ನುವ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಇವತ್ತು ಅವರು ಏನೊಂದು ಆತಂಕವನ್ನು ವ್ಯಕ್ತಪಡಿಸುತ್ತಿದ್ದಾರೆ. ಇವತ್ತು ನ್ಯಾಚುರಲ್ ಜಸ್ಟೀಸ್ ಎನ್ನುವುದು ಫಂಡಮೆಂಟಲ್ ರೈಟ್ಸ್‌ನಲ್ಲಿಯೂ ಕೂಡ ಇದೆ. ಪ್ರಾಪರ್ಟಿಯನ್ನು ಹೊಂದಿದ ಒಬ್ಬ ವ್ಯಕ್ತಿಗೆ ಸಾಕಷ್ಟು ಕಾರಣ ಹಾಗೂ ವಿವರಣೆಗಳನ್ನು ನೀಡದೆ ಮೊಟಗೋಲು ಹಾಕಿಕೊಂಡರೆ ಅದು ತಪ್ಪಾದೀತು ಎನ್ನುವ ಕಾರಣದ ಮೇಲೆ ಸಾಕಷ್ಟು ವಿಚಾರ ಮಾತಿ ಈ ಒಂದು ಕಲಂನಲ್ಲಿ ಅದನ್ನು ಸೇರಿಸಿದ್ದು ಆಗಿದೆ. ಈಗ ತಂದಿರತಕ್ಕಂಥ ಕಾನೂನನ್ನು ಸಧ್ಯಕ್ಕೆ ಹಿಂದಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ಹೇಳಿ, ಇಂದು ನಾವು ಸಭೆಯಂ ಮುಂದೆ ತಂದಿರತಕ್ಕಂಥ ತಿದ್ದುಪಡಿಗೆ ಮಾನ್ಯ ಸದಸ್ಯರು ಬೆಂಬಲ ಕೋಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಮಂತ್ರಿಗಳವರು, ಸಧ್ಯಕ್ಕೆ ಈಗ ತಂದಿರತಕ್ಕಂಥ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದರೆ ಅರ್ಥವೇನು ? ಮುಂದೆ ಹಿಂದಕ್ಕೆ ತೆಗೆದುಕೊಳ್ಳಬಹುದು ಎನ್ನುವ ರೀತಿಯಲ್ಲಿ ಮಾತನಾಡಿದರು ಎಂದು ನಮಗೆ ಅನ್ನಿಸುತ್ತಿದೆ ಇದು ಬಹುಶಃ ಅವರ ಪಕ್ಷದ ಮಿಟಿಂಗ್‌ನಲ್ಲಿ ಚರ್ಚೆಯಾಗಿರಲಾರದೆಂದು ಅನ್ನಿಸುತ್ತಿದೆ. ಚರ್ಚೆಯಾಗಿದ್ದರೆ ಬಹುಶಃ ಅಲ್ಲಿಯೇ ಇದರ ಬಗ್ಗೆ ಸಲಹೆಯನ್ನು ಕೊಟ್ಟಿರುತ್ತಿದ್ದರು ಎಂದು ಕಾಣುತ್ತದೆ. ಈಗ ಸಧ್ಯಕ್ಕೆ ಹಿಂದಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ಹೇಳಿದರೆ ಅರ್ಥವೇನು ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮಂತ್ರಿಗಳವರು ಪ್ರಾಪರ್ಟಿ ಕಾನ್‌ಫಿಸ್ಕೇಟ್ ಮಾಡುವ ಬಗ್ಗೆ, ನ್ಯಾಚುರಲ್ ಜಸ್ಟೀಸ್ ಬಗ್ಗೆ ಹೇಳಿದರು. ಈ ಮೊದಲು ಅವರ ತಲೆಗೆ ಈ ವಿಚಾರ ಹೊಳೆದಿರಲಿಲ್ಲವೇ ? ಯಾರು ಈ ಕಾನೂನಿನ ಸಲಹೆಯನ್ನು ಕೊಟ್ಟರೋ ಗೊತ್ತಾಗಲಿಲ್ಲ, There is one provision in the Criminal Procedure Code. With regard to the seizure of property, if the property or materials used for committing an offence, immediately that man is punished and the property or materials used for committing offence are confiscated by the Government So, property used for committing an offence also goes along with the punishment. ಆ ಸೆಕ್ಷನ್ ಪ್ರಕಾರ ಇಲ್ಲೂ ಕೂಡ, ಸುಮ್ಮನೇ ಹಾದಿಯಲ್ಲಿ ಹೋಗುವ ಲಾರಿಯನ್ನು ವಶಪಡಿಸಿಕೊಂಡು ಸರ್ಕಾರ ತೆಗೆದುಕೊಳ್ಳಲು ಆಗುವುದಿಲ್ಲ, ಅವನು ಅಪರಾಧ ಏನಾದರೂ ಮಾಡಿದ್ದರೆ, Afrer satisfying himself that he has

committed an oflence properties are subjected to seizure becauses they are used for committing an offence. Then these articles become part and parcel of the offence. You should distinguish these two characters. ಆ ದೃಷ್ಟಿಯಿಂದ ಆಲೋಚನೆ ಮಾಡಿ ಎಂದು ಹೇಳುವುದು.

MR DEPUTY SPEAKER.—I will put the consideration motion to the vote of the House. The question is.

"That the Karnataka Forest (Second Amendment) Bill 1976 be taken into consideration '.

The motion was a dopted.

MR. DEPUTY SPEAKER.—I shall take up the con-ideration of Bill clause by clause.

CLAUSE-2

SRI KAGODU THIMMAPPA.—I beg to move.

"that Clause 71 (b) shall be deleted".

MR DEPUTY SPEAKER.—Amendment moved.

"That clause 71 (b) shall be deleted"

† ಶ್ರೀ ಕಾಗೋಡು ತಿಮ್ಮಪ್ಪ —ಮಾನ್ಯ ಅಧ್ಯಕ್ಷರೇ ಈ ತಿದ್ದುಪಡಿಯನ್ನು ಮಾನ್ಯ ಸಚಿವರು ಮಂಡಿಸಿರತಕ್ಕಥ ಉದ್ದೇಶವಾದರೂ ಕೂಡ ಏನಿದೆ ಮತ್ತು ಆದರಿಂದ ಆಗತಕ್ಕಂಥ ಅನಾನುಕೂಲಗಳೇನು ಎನ್ನುವ ಬಗ್ಗೆ ಸಾಕಷ್ಟು ಆಗಲೇ ಕಾರಣಗಳನ್ನು ಕೊಟ್ಟು ಹೇಳಿದ್ದೇನೆ. ಮಾನ್ಯ ಸಚಿವರು ಉತ್ತರ ಹೇಳ ತಕ್ಕಂಥ ಕಾಲದಲ್ಲಿ ಏನು ಹೇಳಿದರು ಯಾವುದಾದರೂ ಆಸ್ತಿಯನ್ನು ಅಥವಾ ಆಸ್ತಿಯೆಂದು ಕಂಡುಬಂದಿರ ತಕ್ಕಂಥ ವಸ್ತುಗಳನ್ನು ಸರ್ಕಾರದವರು ವಶಪಡಿಸಿಕೊಳ್ಳಬೇಕಾದರೆ, ನ್ಯಾಚುರಲ್ ಜಸ್ಟೀಸ್ ಎನ್ನತಕ್ಕಂಥ ಇಧೀರದ ಮೇಲೆ, ಅವರಿಗೆ ಶೋಕಾಸ್ ನೋಟೀಸ್ ಕೊಡಬೇಕು ಮತ್ತು ಸಾಕಷ್ಟು ಅವಕಾಶವನ್ನು ಕೊಡಬೇಕು ಎನ್ನತಕ್ಕಂಥ ಒಂದು ಮಾತನ್ನು ಹೇಳಿದರು. ಅವರು ಹೇಳತಕ್ಕಂಥ ಮಾತಿಗೂ ಅವರು ಇಲ್ಲಿ ಸೆಕ್ಷನ್‌ನಲ್ಲಿ ಹಾಕಬೇಕೆಂದು ತೀರ್ಮಾನ ಮಾಡಿ ಆಳವಡಿಸಿರತಕ್ಕಂಥ ಉದ್ದೇಶಕ್ಕೂ ಭಿನ್ನಾಬಿಪ್ರಾಯವಿದೆ, ಎನ್ನುವುದನ್ನು ಅವರು ಸ್ಪಷ್ಟ ಪಡಿಸಿಕೊಳ್ಳಬೇಕು. ಏತಕ್ಕೆಂದರೆ ಬಹುಶ. ಕ್ರಿಮಿನಲ್ ಪ್ರೊಸೀಜರ್ ಕೋಡ್, ಪೀನಲ್ ಆಕ್ಟ್‌ನಲ್ಲಿ ಇರುವ ಹಾಗೆ ಯಾವುದೇ ಅಪರಾಧ ಮಾಡಿರಲಿ, ಯಾವುದೇ ಮರ್ಡರ್ ಆಗಿರಲಿ, ಅಥವಾ ಇನ್ನು ಯಾವುದೇ ಅಪರಾಧವನ್ನು ಮಾಡಿರಲಿ, ಆ ರೀತಿ ಅಪರಾಧ ಮಾಡಿತಕ್ಕಂಥ ಕಾಲದಲ್ಲಿ ಏನೇನು ವಸ್ತುಗಳನ್ನು ಉಪಯೋಗಿಸಲ್ಪಟ್ಟಿದೆಯೋ ಅವೆಲ್ಲವನ್ನೂ ಕೂಡ ತೆಗೆದುಕೊಂಡು, ತೀರ್ಮಾನವಾದಾಗ, ಅವಕ್ಕೆ ಸಂಬಂಧ ಪಟ್ಟ ಎಲ್ಲಾ ವಸ್ತುಗಳನ್ನೂ ಕೂಡ ಸರ್ಕಾರ ಮೊಟ್ಟುಗೋಲು, ಹಾಕಿಕೊಳ್ಳುತ್ತದೆ, ಇದು ಕ್ರಿಮಿನಲ್ ಪ್ರೊಸೀಜರಲ್ ಕೋಡ್ ಮತ್ತು ಪೀನಲ್ ಕೋಡ್‌ನಲ್ಲೂ ಇರು ತಕ್ಕಂಥ ಸಿದ್ಧಾಂತ. ಇಲ್ಲೂ ಕೂಡ ಹಿಂದೆ ಏನು ಕ್ರಿಮಿನಲ್ ಪ್ರೊಸೀಜರ್ ಕೋಡ್ ಮತ್ತು ಪೀನಲ್ ಕೋಡ್ ಪ್ರಕಾರ ಯಾವ ರೀತಿ ಶಿಕ್ಷೆ ವಗಾಡುವುದಕ್ಕೆ ಸಾಧ್ಯತೆ ಇದೆಯೋ ಅದೇ ರೀತಿ ಕೆಲವೆಂದು ಅಪರಾಧ ಗಳನು ಆರಣ್ಯ ಇಲಾಖೆಗ ಸಂಭಂದಪಟ ಂತೆ ಅಪರಾಧಗಳನ್ನು ಮಾಡುತ್ತಾರೋ, ಅವರಿಗೂ ಶಿಕ್ಷೆಯನ್ನು ಮಾಡುವುದಕ್ಕೆ ಆರಣ್ಯ ಇಲಾಖೆಯ ಕಾನೂನಿನಲ್ಲಿ ಆಳವಡಿಸಿಕೊಂಡು ಹಾಗೆ ಅಪರಾಧಕ್ಕೆ ಸಂಬಂಧಪಟ್ಟ ಅಪಾದನೆಗಳು ಇದ್ದಾರೆ, ಆ ರೀತಿ ಅಪಾದನೆಗಳನ್ನು ನಡೆಸತಕ್ಕಂಥ ಕಾಲದಲ್ಲಿ ಬಳಸಿರತಕ್ಕೆಂಥ ಎಲ್ಲಾ ವಸ್ತುಗಳನ್ನು, ಎಲ್ಲಾ ಮೆಟಿರಿಯಲ್ಸ್‌ಗಳನ್ನೂ, ವಶಪಡಿಸಿ ಕೊಳ್ಳಬೇಕಾಗುತ್ತದೆ, They are all materials used for committing offence. There is absolutely no relationship between these two philosophies of criminalogy. ಆದುದರಿಂದ ಈ ಹಿನ್ನೆಲೆಯಲ್ಲಿ ವಿಚಾರ ಮಾಡಬೇಕೆ ವಿನಹ ಯಾವುದೇ ಒಂದು ಆಸ್ತಿಯನ್ನು ವಶಪಡಿಸಿಕೊಳ್ಳಬೇಕಾದರೆ ಸಾಕಷ್ಟು ಅವರಿಗೆ ಅವಕಾಶ ಕೊಡಬೇಕು ಎನ್ನುವ ಕಲ್ಪನೆ ಏನಿದೆ ಅದನ್ನು ದಯವಿಟ್ಟು ಆಲೋಚನೆ

ಮಾಡಿ, ಅದನ್ನು ಅದೇ ರೀತಿ ಇಡುವುದಕ್ಕೆ ಹೋಗಬೇಡಿ. It stands on a different footing. ಆದುದರಿಂದ ತಾವು ದಯವಿಟ್ಟು ಆಲೋಚನೆ ಮಾಡಿ ಅದನ್ನು ರಿಲೀಫ್ ಮಾಡಬೇಕು. ಇನ್ನೊಂದು ಸೂಚನೆ ಏನು ಹೇಳುತ್ತಿದೇನೆಂದರೆ, ನಮಗೊಂದು ಅನುಮಾನ ಬರುತ್ತಿದೆ, ಈ ಒಂದು ಕ್ಲಾಜ್ 2ಎ (ಬಿ)ನ್ನು ಸೇರಿಸತಕ್ಕಂಥ ಉದ್ದೇಶದ ಬಗ್ಗೆ, ತಮಗೆ ಯಾರೋ ಸಲಹೆ ಮಾಡಿದ್ದಾರೆ ಯಾವ ಕಾನೂನಿನ ತಜ್ಞರೋ ಹೇಳಿರಬೇಕು, ಅಥವಾ ಇನ್ನು ಯಾರದೋ ಪ್ರೇರಣೆಯಿಂದ ಇದನ್ನು ತಾವು ನಡೆಸಿರಬಹುದು ಯಾವುದೋ ಒಂದು ದೈತ್ಯ ಶಕ್ತಿ ತಮಗೆ ಪ್ರೇರಣೆ ಮಾಡದೇ ಹೋಗಿದ್ದರೆ, ಈ ಒಂದು ಪಾದವನ್ನು ಪಂಡನೆ ಮಾಡುವುದಕ್ಕೆ ಖಂಡಿತ ಹೋಗುತ್ತಿರಲಿಲ್ಲ. ಇದರ ಬಗ್ಗೆ ಮಾನ್ಯ ಕೆ ಕ್ಷೆಫ್. ಪಾಟೀಲ್ ರವರು ಬಹಳ ಸೂಕ್ಷ್ಮವಾಗಿ ಹೇಳಿದರು. ಇನ್ನು ತಮಗೆ ಗೊತ್ತಿದೆ ಪ್ಲೇಪೆಡ್ ಮರಗಳನ್ನು ಕಡಿದು ಮಾರುವುದಕ್ಕೆ ಅವಕಾಶ ವಿದೆ. ದೊಡ್ಡ ಕಂಪೆನಿಯ ಯಜಮಾನ ಮುಂಬಯಿಯಲ್ಲಿರುತ್ತಾನೆ, ಇನ್ನೊಬ್ಬ ಇನ್ನೊಂದು ಕಡೆ ಇರುತ್ತಾನೆ ಮತ್ತೊಬ್ಬ ದೇಶದ ಯಾವುದೋ ಒಂದು ಮೂಲೆಯಲ್ಲಿ ಕುಳಿತು ಕೆಲಸ ಮಾಡುತ್ತಾನೆ. ಇಲ್ಲಿ ಅವರ ಡ್ರೈವರ್ ಅಥವಾ ಒಟ್ಟು ಸಣ್ಣ ನೌಕರರ ಕೆಲಸ ವಾಗುತ್ತಿರುತ್ತಾನೆ. ಇಲ್ಲಿ ಸ್ಥಳದಲ್ಲಿ ಕೆಲಸ ಮಾಡುವ ನೌಕರರಿಗೂ ಮತ್ತು ಯಜಮಾನನಿಗೂ ಅಂತರ ಬಹಳ ದೂರವಿರುತ್ತದೆ. Evidently nobody proves that they had any connection with the field level to the residential level.

ಇತ್ತೀಚೆಗೆ ನಡೆದ ಒಂದು ಘಟನೆಯನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಜ್ಞಾಪಕಕ್ಕೆ ತರಬಯಸುತ್ತೇನೆ. ಹೊಸನಗರದಲ್ಲಿ, ಒಂದು ಕಂಪನಿಯವರಿಗೆ ಇಂತಿಷ್ಟು ಮರಗಳನ್ನೇ ಕಡಿಯ ಬೇಕೆಂದು ಕೊಟ್ಟಿದ್ದರೂ. ಆ ಕಂಪನಿಯವರು ಅದರ ಜೊತೆಗೆ ಇತರ ಅರಣ್ಯ ವಸ್ತುಗಳನ್ನು ಕಳ್ಳತನ ದಿಂದ ಸಾಗಿಸುತ್ತಿದ್ದಾಗ ಅರಣ್ಯ ಇಲಾಖಾಧಿಕಾರಿಗಳು, ಅವರನ್ನು ಹಿಡಿದು, ಕಳ್ಳತನದಿಂದ ಸಾಗಿಸುತ್ತಿದ್ದ ವೆನ್ನಲಾದ ವಸ್ತುಗಳನ್ನು ಸೀಸ್ ಮಾಡಿದ್ದಾರೆ. ಈ ಒಂದು ಮಾತನ್ನು ನಾನು ಈ ಸದನದಲ್ಲಿ ಅನೇಕ ಬಾರಿ ಪ್ರಸ್ತಾಪ ಮಾಡಿದ್ದೇನೆ. ಒಂದು ಕಂಪನಿಯವರಿಗೆ ಕೊಟ್ಟಿಲ್ಲದೇ ಇರುವ ಮರಗಳನ್ನು, ಅವರು ಕಳ್ಳತನದಲ್ಲಿ ಕಡಿಮೆ ಮುಂಬೈ, ಮುಂತಾದ ನಗರಗಳಿಗೆ ಸಾಗಾಣಿಕೆ ಮಾಡುತ್ತಿದ್ದಾರೆ. ಇತ್ತೀಚೆಗೆ ಕಳ್ಳ ತನದಲ್ಲಿ ಮರಗಳನ್ನು ಕಡಿದು ಸಾಗಾಣಿಕೆ ಮಾಡುತ್ತಿದ್ದವರನ್ನು ಅರಣ್ಯ ಇಲಾಖಾಧಿಕಾರಿಗಳು ಹಿಡಿದು, ತನಿಕೆ ಮಾಡುತ್ತಿದ್ದಾರೆ ಎಂದು ಕೇಳಿದ್ದೇನೆ. ಈ ರೀತಿ ದೊಡ್ಡ ದೊಡ್ಡ ಕಂಪನಿಗಳವರು ತಮಗೆ ನೀಡದೇ ಇರತಕ್ಕ ಮರಗಳನ್ನು ಕಡಿದು ಅವುಗಳನ್ನು ಕಳ್ಳತನದಲ್ಲಿ ಸಾಗಣೆ ಮಾಡಿ, ಲಾಭ ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಒಂದು ವೇಳೆ, ಈ ರೀತಿಯಾಗಿ ಕಳ್ಳತನದಲ್ಲಿ ಮರಗಳನ್ನು ಸಾಗಿಸುತ್ತಿದ್ದಾಗ, ಅರಣ್ಯ ಇಲಾಖಾಧಿಕಾರಿಗಳಿಗೆ ಸಿಕ್ಕಿಹಾಕಿಕೊಂಡರೆ, ಮರಗಳನ್ನು ಸಾಗಿಸುತ್ತಿದ್ದ ಲಾರಿಯನ್ನೂ ಮತ್ತು ಅದನ್ನು ಚಾಲನೆ ಮಾಡುತ್ತಿದ್ದ ಚಾಲಕನನ್ನು ಬಂದಿಸುತ್ತಾರೆ ಆದರೆ, ಆ ಕಂಪನಿಯ ಯಜಮಾನ ಮುಂಬಯಿಯಲ್ಲಿಲೋ ದಾಂಡೇಲಿಯಲ್ಲಿಲೋ ಇರುತ್ತಾನೆ. ಆಗ ಅವನು, ನನಗೆ ಗೊತ್ತಾಗದ ರೀತಿಯಲ್ಲಿ ಮರಗಳನ್ನು ಸಾಗಣೆ ಮಾಡಿದ್ದಾರೆ, ಇದರ ಅಪರಾಧವನ್ನು ನನ್ನ ಮೇಲೆ ಹೊರಿಸಬೇಡಿ, ನಾನು ನಿರಪ ರಾಧಿ, ನನ್ನ ವಾಹನವನ್ನು ಬಿಟ್ಟು ಬಿಡಿ ಎಂದು ಅಧಿಕಾರಿಗಳ ಮುಂದೆ ಹೇಳಿಕೊಳ್ಳುತ್ತಾನೆ. ಆದುದ ರಿಂದ, ಆ ಅಧಿಕಾರಿಗಳಿಗೆ ಏನು ಅಭಿಪ್ರಾಯ ಬರುತ್ತದೆ? ಒಟ್ಟಾರೆ ಗಮನಿಸಿದರೆ, ಈ ಯಜಮಾನ ಹೇಳಿರುವ ಮಾತು ಸತ್ಯವೆಂದು ತಿಳಿದು ಅಧಿಕಾರಿಗಳು ವಾಹನವನ್ನು ಬಿಟ್ಟುಬಿಡುತ್ತಾರೆ ಮತ್ತು ಅವನು ಆಗ ನಿರಪರಾಧಿಯಾಗುತ್ತಾನೆ ಆದುದರಿಂದ, ಹಿಂದೆ ಏನು ಅಕ್ರಮವಾಗಿ ವಸ್ತುಗಳನ್ನು ಸಾಗಿಸಿ ತ್ತಿದ್ದರೂ, ಅದರ ಬದಲು ಈಗ ಸಕ್ರಮವಾಗಿಯೋ ವಸ್ತುಗಳನ್ನು ಸಾಗಿಸಲು ಅವಕಾಶವಾಗುವಂತೆ ಬಿಲ ಕ್ಲಾಸನ್ನು ಸೇರಿಸಿದ್ದಾರೆ ಎಂದು ನಾನು ಸರ್ಕಾರದ ಮೇಲೆ ನೇರವಾದ ಆಪಾದನೆ ಮಾಡಬೇಕಾಗಿದೆ. ವಿಮ್ಕೋ, ಪ್ಲೈವುಡ್ ಕಾರ್ಖಾನೆ ಮುಂತಾದ ದೊಡ್ಡ ದೊಡ್ಡ ಕಂಪನಿಗಳವರ ಪ್ರೇರಣೆಗೆ ಸರ್ಕಾರ ದವರು ಹೆಚ್ಚು ಕಡಿಮೆ ಒಳಗಾಗಿದ್ದಾರೆ ಎಂದು ಹೇಳಂತ್ತೇನೆ. ಆ ಕಂಪನಿಯ ಯಜಮಾನರುಗಳು ದೂರ ಇದ್ದುಕೊಂಡು ಬೇರೆ ಜನರನ್ನು ಬಿಟ್ಟು ಹೇರಳವಾದ ಮರವನ್ನು ಕಳ್ಳಸಾಗಾಣಿಕೆ ಮಾಡುವ ಹವ ಣಿಕೆಯ ಪ್ರೇರಣೆಯೊಳಗಾಗಿ ಇಂಥಾ ಬಿ-ಬಿ ಕ್ಲಾಸನ್ನು ಪಂಡಿಸುವುದಕ್ಕೆ ಕಾರಣವಾಗಿದೆ ಎಂದು ನಾನು ಹೇಳಂತ್ತೇನೆ. ಇಲ್ಲದೇ ಹೋದರೆ, ಇಂಡಿಯನ್ ಕ್ರಿಮಿನಲ್ ಪ್ರೊಸೀಜರ್ ಕೋಡ್, ಪೀನಲ್ ಕೋಡ್ ಅಥವಾ ಪೋಲಿಸ್ ಆಕ್ಟ್ ಇರಲಿಲ್ಲವೆ? ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ, ಸೀಸ್ ಮಾಡಿದ ಪಾರ್ಟಿ ಗಳನ್ನು ಬಿಡಬೇಕಾದರೆ ಮೊದಲು ಪೋಕಾಸ್ ನೋಟಿಸ್ ಕೊಡಬೇಕೆಂದಿದೆಯೆ? ಇಲ್ಲ, ಟ್ರೈಯಲ್ ಪನಿಷ್‌ಮೆಂಟ್ ಅವಕಾಶವಿದೆ ಮತ್ತು ಕೋರ್ಟಿನಲ್ಲಿ ಇದಕ್ಕೆ ಈತನು ಸಂಬಂಧಪಟ್ಟಿಲ್ಲ ಎಂದು ತೀರ್ಮಾನ

ವಾದರೆ, ಆಗ ಅದಕ್ಕೆ ಯಾರು ಸಂಬಂಧಪಟ್ಟಿರುವರೋ ಅವರು ಶಿಕ್ಷೆಗೊಳಗಾಗುತ್ತಾರೆ. ಆಗ ಮಾತ್ರ ಪ್ರಾಪರ್ಟಿಯನ್ನು ರಿಲೀಸ್ ಮಾಡುತ್ತಾರೆ. ಹೀಗಿರುವಾಗ, ಈಗ ಹೊಸದಾಗಿ ಈ ಕ್ಲಾಸನ್ನು ತರುವ ಪ್ರಮೇಯವಾದರೂ ಏನು?

MR. DEPUTY SPEAKER.—There is a slight inconsistency in the argument. That the property involved in the offences under the Criminal Procedure Code are very costly. It comes to more than a lakh of rupees.

SRI KAGODU THIMMAPPA —We are concerned with the material used for committing offences, They are bound to be confiscated. There is no need to issue a show cause notice.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಸದಸ್ಯರು ಚೆನ್ನಾಗಿ ಚರ್ಚೆ ನಡೆಸುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ —ಹೌದು, ನಿಮ್ಮನ್ನು ನೋಡಿ ನಮ್ಮ ಬಾಯಿ ಒಣಗುತ್ತಿದೆ. ಗಂಧದ ಮರಗಳನ್ನೂ ರೋಜ್ ಮರಗಳನ್ನೂ, ಟೀಕ್ ಮರಗಳನ್ನೂ ಕಳ್ಳತನದಲ್ಲಿ ಸಾಗಿಸುತ್ತಿದ್ದ ಕದೀಮರು ಯಾರು? ಯಾರನ್ನು ಹಿಡಿದಿದ್ದೀರಿ, ಹಿಡಿದಿರುವ ವ್ಯಕ್ತಿಗಳು ಯಾರು? ಹಿಡಿದಂಥ ವ್ಯಕ್ತಿಗಳು ಲಕ್ಷಾದಿಪತಿಗಳು. ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದಂಥವರನ್ನು ಹಿಡಿದಿದ್ದಾರೆ. ಅರಣ್ಯದ ವಸ್ತುಗಳನ್ನು ಕಳ್ಳಸಾಗಣೆ ಮಾಡುವವರನ್ನು ಹಿಡಿದು, ಅವರು ಸಾಗಿಸುತ್ತಿದ ವಸ್ತುಗಳನ್ನು ವಶಪಡಿಸಿಕೊಂಡು, ಅವರ ಮೇಲೆ ತನಿಖೆ ಮಾಡಿ ಚಾರ್ಜ್‌ಷೀಟ್ ಹಾಕುವುದು ಇಷ್ಟೆಲ್ಲಾ ಅಧಿಕಾರವನ್ನು ಇವತ್ತಿನ ದಿವಸ ಅರಣ್ಯ ಇಲಾಖೆ ಪಡೆದುಕೊಂಡು ಇವತ್ತು ಆ ವಸ್ತುವನ್ನು ಸ್ವಾಧೀನಪಡಿಸಿಕೊಳ್ಳುತಕ್ಕ ವಿಚಾರದಲ್ಲಿ ಮಾತ್ರ, ತೀರ ನೆಂಟಸ್ತನ ಬೆಳೆಸುವುದಕ್ಕೆ ಕೈ ಹಾಕಿದ್ದಾರೆ ಎಂದರೆ, ಇವರುಗಳು ದೊಡ್ಡ ದೊಡ್ಡ ಬಂಡವಾಳಶಾಹಿಗಳ ಬಾಲಬಡುಕರಾಗಿದ್ದಾರೆ ಎಂದು ನಾನು ನೇರವಾಗಿ ಆಪಾದನೆ ಮಾಡಬೇಕಾಗಿದೆ ಎಂದು ಹೇಳುತ್ತಾ ಈ ನನ್ನ ತಿದ್ದುಪಡಿಯನ್ನು ಮಂಡಿಸುತ್ತೇನೆ.

† ಶ್ರೀ ಸಿ. ಬೈರೇಗೌಡ.—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಕಾನೂನುಬದ್ಧವಾದ ಮತ್ತು ತರ್ಕಬದ್ಧವಾದ ಅಂಶವನ್ನು ಹೇಳಿದಾರೆ. ಅವರು ಹೇಳಿರುವುದೆಲ್ಲಾ ಅಕ್ಷರಶಃ ನಿಜ. ಕಾರಣವೇನೆಂದರೆ, ಗಂಧದ ಮರವನ್ನಾಗಲೀ, ಬೀಟೆ ಮರವನ್ನಾಗಲೀ ಅಥವಾ ಇನ್ನಿತರ ಅರಣ್ಯ ವಸ್ತು ಗಳನ್ನಾಗಲೀ, ಕಳ್ಳಸಾಗಾಣಿಕೆ ಮಾಡುತ್ತಿದ್ದಾರೆ ಎನ್ನುವುದು ಸಾಬೀತಾದ ಮೇಲೆ. ಸಂಬಂಧಪಟ್ಟ ಯಜಮಾನನು ಇದಕ್ಕೆ ನಾನು ಕಾರಣನಲ್ಲ ; ನನಗೆ ಗೊತ್ತಿಲ್ಲದ ರೀತಿಯಲ್ಲಿ ಇಲ್ಲಿ ಕಳ್ಳಸಾಗಣೆ ಮಾಡಿದ್ದಾರೆ ಎಂದು ಅವನೇ ಅಧಿಕಾರಿಗಳ ಮುಂದೆ ಹೇಳಿಕೊಂಡರೆಸಾಕು. ಆಗ ಅಧಿಕಾರಿಗಳು ಆ ಯಜಮಾನನನ್ನು ನಿರಪರಾಧಿ ಎಂದು ಹೇಳಿದ ಮೇಲೆ, ವಶಪಡಿಸಿಕೊಂಡಿದ್ದ ಆತನ ವಾಹನಗಳ ಮೇಲೆ ಸರ್ಕಾರದ ಹಕ್ಕು ಇರುವುದಿಲ್ಲ ; ಆದರ, ಬೇರೆ ಸಂದರ್ಭದಲ್ಲಿ ಮತ್ತು ಬೇರೆ ಕಾನೂನಿನ ಪ್ರಕಾರ ನ್ಯಾಯಾಲಯಕ್ಕೆ ಹೋಗಿ, ಆ ನ್ಯಾಯಾಲಯದಲ್ಲಿ ಈ ಪ್ರಕರಣ ಸಾಬೀತಾದರೆ, ಆಗ ಮಾತ್ರ ವಶಪಡಿಸಿಕೊಂಡಿರತಕ್ಕ ಆತನ ವಾಹನವನ್ನು ಅಥವಾ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ.

ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರೆ, ಮಾನ್ಯ ಮಂತ್ರಿಗಳು ಆ ಕಡೆ ಈ ಕಡೆ ಮಾತನಾಡುತ್ತಿದ್ದಾರೆ. ಅವರಿಗೆ ಈ ಖಾತೆ ಇಷ್ಟವಿಲ್ಲದಿದ್ದ ಪಕ್ಷದಲ್ಲಿ, ಅದನ್ನವರು ಬಿಟ್ಟು ಹೋಗಲಿ. ಈ ರೀತಿಯ ಬೇಜವಾಬ್ದಾರಿಯ ವರ್ತನೆಯನ್ನು ಅವರು ಏತಕ್ಕೆ ಮಾಡಬೇಕು ?

ಉಪಾಧ್ಯಕ್ಷರು.—ಹೆಚ್ಚು ಮಾತನಾಡುತ್ತಾ ಹೋದರೆ ಕನ್‌ಫ್ಯೂಸ್ ಆಗುತ್ತದೆ.

ಶ್ರೀ ಪೆಟ್. ಟಿ. ಕೃಷ್ಣಪ್ಪ.—ಇದು ಕಳ್ಳಸಾಗಣೆ ಮಾಡತಕ್ಕ ಕದೀಮರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ವಿಚಾರ: ಇದರ ಬಗ್ಗೆ ಅವರಿಗೆ ಅಷ್ಟು ಕಾಳಜಿ ಬೇಡವೇ ?

ಶ್ರೀ ಸಿ ಬೈರೇಗೌಡ.—ಮಾನ್ಯ ಮಂತ್ರಿಗಳಿಗೆ ಎಷ್ಟು ಹೇಳಿದರೂ ಕಿವಿ ಕೇಳಿಸುವುದಿಲ್ಲ. ಮಾನ್ಯ ತಿಮ್ಮಪ್ಪನವರು ಹೇಳಿರತಕ್ಕ ವಿಚಾರ ತತ್ವಬದ್ಧವಾಗಿದೆ, ಸರ್ಕಾರದವರು ತಂದಿರತಕ್ಕ ೭೧(ಬಿ) ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ತಿಮ್ಮಪ್ಪನವರ ತಿದ್ದುಪಡಿಯನ್ನು ಸಮರ್ಥನೆ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಎನ್. ಪಾಟೀಲ್ —ಅಧ್ಯಕ್ಷರೇ, ಮಾನ್ಯಸದಸ್ಯರಾದ ತಿಮ್ಮಪ್ಪನವರು ೭೧ (ಬಿ) ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಿರ್ಣಯ ತಂದಿದ್ದಾರೆ ಆ ನಿರ್ಣಯವನ್ನು ಬೈರೇಗೌಡರು ಸಮರ್ಥಿಸಿದ್ದಾರೆ ಅದರ ಮೇಲೆ ಸರ್ಕಾರ ಕೂಡ ವಿಚಾರಗಳನ್ನು ಹೇಳಿದೆ, ಒಂದು ದೃಷ್ಟಿಯಿಂದ ಮಾನ್ಯ ಸದಸ್ಯರು ಹೇಳುತ್ತಾ ಇರುವುದು ಯೋಗ್ಯವಾಗಿ ಕಂಡು ಬಂದರೂ ನ್ಯಾಚುರಲ್ ಜಸ್ಟೀಸ್ ಇಲ್ಲದಂತಾಗುತ್ತದೆ, ಆ ದೃಷ್ಟಿಯಿಂದ ಸರ್ಕಾರ ಈ ತಿದ್ದುಪಡಿಯನ್ನು ಒಪ್ಪುವುದಿಲ್ಲ ಎಂದು ಹೇಳಬಯಸುತ್ತೇನೆ.

MR. DEPUTY SPEAKER.—I shall put the amendment of the hon'ble Member Sri Kagodu Thimmappa to the vote of the House. The question is :

" That clause 71B shall be deleted.,'

SRI KAGODU THIMMAPPA.—I claim a division. The House divided.

The result of the Division is Ayes :5, Noes : 36

The amendment was negatived.

MR. DEPUTY SPEAKER.—The question is :

"That clause 2 do stand part of the Bill."

The motion was adopted.

Clause 2 was added to the Bill.

MR. DEPUTY SPEAKER.—The question is :

"That clause 1, long Title the Preamble and the Enacting Formula do stand part of the Bill."

The motion was adopted.

Clause 1, long Title the Preamble and the Enacting Formula were added to the Bill,

Motion to Pass

SRI C. N. PATIL.—Sir, I beg to move :

"That the Karnataka Forest(Second Amendment) Bill, 1976 be passed."

MR DEPUTY SPEAKER.—The question is :

"That the Karnataka Forest (Second Amendment)Bill, 1976 be passed."

The motion was put and adopted and the Bill was passed.